ಸಂಪುಟ : 8 ಸಂಚಿಕೆ : 210 ಪುಟ : 4 ಬೆಲೆ : 3.00 ಮಂಗಳವಾರ ಸೆಪ್ಟೆಂಬರ್ 26, 2023 Mob : 9448326533- 9019256545 ಗದಗ

ಸಂಪಾದಕರು : ಎಚ್.ಎಮ್ ಶರೀಫನವರ್

# ವಿಜಯ ಸಾಕ್ಷಿ

ವಾಸ್ತವ, ವಸ್ತುನಿಷ್ಠ, ವಿಭಿನ್ನ...

VIJAYA SAKSHI KANNADA DAILY ಕನ್ನಡ ದಿನಪತ್ರಿಕೆ




Volume : 8 Issue : 210 Pages : 4 Price : 3.00 Tuesday September 26, 2023 Gadag RNINo:KARKAN/2015/63412 E-mail: vijayasakshidaily@gmail.com Post Regn.No:GDG/72/2023-25

### ಮುಂಡರಗಿ ತಾಲೂಕು ಬರ ಪೀಡಿತ ತಾಲೂಕೆಂದು ಘೋಷಿಸಿಲು ವಿವಿಧ ಸಂಘಟನೆಗಳ ಆಗ್ರಹ /ಸರಕಾರದ ಮಲತಾಯಿ ಧೋರಣೆ ಖಂಡಿಸಿ ಬೃಹತ್ ಪ್ರತಿಭಟನೆ

# ಸಂಪೂರ್ಣ ಪಟ್ಟಣ ಬಂದ್



■ ವಿಜಯಸಾಕ್ಷಿ ಸುದ್ದಿ, ಮುಂಡರಗಿ


ತಾಲೂಕಿನ ವಿವಿಧ ಅಭಿವೃದ್ಧಿಪರ ಸಂಘಟನೆಗಳು, ರೈತಪರ ಸಂಘಟನೆಗಳು, ಕಾರ್ಮಿಕ ಸಂಘಟನೆಗಳು ಮತ್ತು ಕನ್ನಡಪರ ಸಂಘಟನೆಗಳ ಸಹಯೋಗದಲ್ಲಿ ಸೋಮವಾರ ಸಂಪೂರ್ಣ ಪಟ್ಟಣವನ್ನು ಬಂದ್ ಮಾಡಿ, ತಾಲೂಕನ್ನು ಬರಪೀಡಿತ ಎಂದು ಘೋಷಿಸುವಂತೆ ಆಗ್ರಹಿಸಲಾಯಿತು.

ವಿವಿಧ ಸಂಘಟನೆಗಳ ಸಹಯೋಗದಲ್ಲಿ ಕೋಟೆ ಮಾರುತಿ ದೇವಸ್ಥಾನದಿಂದ ಆರಂಭವಾದ ಪ್ರತಿಭಟನೆಗೆ ನಾಡೋಜ ಡಾ. ಅನ್ನದಾನೀಶ್ವರ ಸ್ವಾಮೀಜಿ ಚಾಲನೆ ನೀಡಿದರು. ನಗರದ ಪ್ರಮುಖ ಬೀದಿಗಳಲ್ಲಿ ರೈತಪರ ಹೋರಾಟಗಾರರು ಘೋಷಣೆಗಳನ್ನು ಕೂಗಿ ಸರಕಾರದ ಕ್ರಮವನ್ನು ಖಂಡಿಸಿ ಪ್ರತಿಭಟಿಸಿದರು.

> ಜಿಲ್ಲಾ ರೈತ ಸಂಘದ ಅಧ್ಯಕ್ಷ ಶಿವಾನಂದ ಇಟಗಿ ಮಾತನಾಡಿ, ರಾಜ್ಯದಲ್ಲಿ ಶ್ರೀ ನಂಜುಂಡಪ್ಪ ವರದಿ ಪ್ರಕಾರ, ಸದಾ ಬರಗಾಲದಿಂದ ಬೇಯುತ್ತಿರುವ ಮುಂಡರಗಿ ಅತೀ ಹಿಂದುಳಿದ ತಾಲೂಕೆಂದು ಗುರುತಿಸಲ್ಪಟ್ಟಿದೆ. ಹೀಗಿದ್ದಾಗ್ಯೂ ಸಹ ನಮ್ಮ ತಾಲೂಕನ್ನು ಸೌಲಭ್ಯದಿಂದ ಕೈಬಿಟ್ಟಿರುವುದು ಮಲತಾಯಿ ಧೋರಣೆಯಾಗಿದೆಯೆಂದು ಎಂದು ದೂರಿದರು.

ಹೋರಾಟಗಾರ ವಾಯ್. ಎನ್. ಗೌಡರ ಮಾತನಾಡಿ, ರಾಜ್ಯ ಸರಕಾರವು 3 ಜಿಲ್ಲೆಗಳ 195 ತಾಲೂಕುಗಳನ್ನು ಬರಪೀಡಿತ ತಾಲೂಕುಗಳೆಂದು ಘೋಷಿಸಿದೆ. ಅದರಲ್ಲಿ 11 ತಾಲೂಕುಗಳನ್ನು ತೀವ್ರ ಬರಪೀಡಿತ, 31 ತಾಲೂಕಗಳನ್ನು ಸಾಧಾರಣ ಬರಪೀಡಿತವೆಂದು ಈಗಾಗಲೇ ಘೋಷಿಸಿದೆ. ಆದರೆ, ಗದಗ ಜಿಲ್ಲೆಯ ಗದಗ, ರೋಣ, ನರಗುಂದ, ಶಿರಹಟ್ಟಿ, ಲಕ್ಷ್ಮೇಶ್ವರ ಹಾಗೂ ಗಜೇಂದ್ರಗಡ ತಾಲೂಕುಗಳನ್ನು ಬರಪೀಡಿತವೆಂದು ಘೋಷಿಸಿದ್ದರೂ, ಮುಂಡರಗಿ ತಾಲೂಕೊಂದನ್ನು






ಮಾತ್ರ ಕೈಬಿಟ್ಟಿರುವುದು ಖಂಡನೀಯ ಎಂದರು.

ಗದಗ ಜಿಲ್ಲೆಯನ್ನು ಸಂಪೂರ್ಣ ಬರಪೀಡಿತ ಎಂದು ಘೋಷಿಸಬೇಕು ಎಂಬ ಕ್ರಿಯಾ ಯೋಜನೆಯನ್ನು ಕೆಡಿಪಿ ಸಭೆಯಲ್ಲಿ ಅನುಮೋದಿಸಲಾಗಿದೆ. ಆದರೆ, ಅಧಿಕಾರಿಗಳ ಪ್ರಕಾರ, ಅಲ್ಲಲಿ ಇಬ್ಬನಿಯಂತೆ ಮಳೆ ಬೀಳುವ ಪ್ರದೇಶವನ್ನು ಗುರುತಿಸಿ ಸರಕಾರಕ್ಕೆ ತಪ್ಪು ವರದಿ ಸಲ್ಲಿಸಲಾಗಿದೆ. ಇದು ಅತ್ಯಂತ ನೋವಿನ ವಿಚಾರ ಎಂದರು.

15 ದಿನಗಳ ಹಿಂದೆ ಕೃಷಿ ಸಚಿವ ಕಷ್ಣ ಭೈರೇಗೌಡ ಒಂದು ದಿನದ ಸುದೀರ್ಘ ಸಭೆಯ ನಂತರ, ಮುಂಡರಗಿ ತಾಲೂಕನ್ನು ಬರ ಪೀಡಿತವೆಂದು ಘೋಷಿಸುವ ಬಗ್ಗೆ ಚರ್ಚಿಸಿ, ಶಾಸಕ ಜಿ.ಎಸ್ ಪಾಟೀಲ, ಹಾಗೂ ತಾವು ಸರ್ಕಾರಕ್ಕೆ ಮನವಿ ಮಾಡಿದ್ದೇವೆ. ತ್ವರಿತವಾಗಿ 2ನೇ ಹಂತದಲ್ಲಿ ಬರ ಘೋಷಣೆ ಮಾಡಲಾಗುವುದು

▶▶ 3ನೇ ಪುಟಕ್ಕೆ

## ಗದಗ-ಬೆಟಗೇರಿ ಅವಳಿ ನಗರದಲ್ಲಿ ಇಂದು ನೀರು ಪೂರೈಕೆ ಎಲ್ಲೆಲ್ಲಿ?

■ ವಿಜಯಸಾಕ್ಷಿ ಸುದ್ದಿ, ಗದಗ

ಗದಗ ಬೆಟಗೇರಿ ಅವಳಿ ನಗರದಲ್ಲಿ ಸೆಪ್ಟೆಂಬರ್ 26 ರಂದು ಈ ಕೆಳಗಿನ ಸ್ಥಳಗಳಿಗೆ ನೀರು ಪೂರೈಕೆ ಮಾಡಲಾಗುವುದು.

**ಸ್ಥಳಗಳ ವಿವರ :** ವಾರ್ಡ್ ನಂಬರ್. 26 ರಲ್ಲಿ ಕೃಷ್ಣ ಟಾಕೀಸ್ ಕಲಾಮಂದಿರ ರಸ್ತೆ, ಅಕ್ಕನ ಬಳಗ, ಜೆಟಿ ಮಠ ರೋಡ್, ಅಂಗಡಿಯವರ ಲೈನ್, ಬಂಗಾರಶೆಟ್ಟರ್ ಲೈನ್, ಚಳ್ಳಮರದ ಲೈನ್, ಮಾಳೆಕೊಪ್ಪಮಠದ ಲೈನ್, ಮೀನಾಕ್ಷಿ ಭಟ್ಟರ ಲೈನ್, ಗೊಡಚಿ ಖಾನಾವಳಿ ಲೈನ್,

ವಾರ್ಡ್ ನಂಬರ್. 22 ದೊಡ್ಡ ಮಸೀದಿ ಲೈನ್, ವಾರ್ಡ್ ನಂಬರ್. 13 ಅಂಡ್ 12 ಸಂಜೀವಿನಿ ಆಸ್ಪತ್ರೆ ಬಾಗಮರ್ ಫರ್ನಿಚರ್ಸ್, ಹೊಂಬಾಳಿ ಲೈನ್, ಹಳ ಸಾಯಿಬಾಬಾ ಗುಡಿ ಲೈನ್, ಕೊಳಚೆ ಪ್ರದೇಶ ಲೈನ್, ಗರಗವರ ಲೈನ್, ನಾವಳ್ಳಿ ಅವರ ಲೈನ್, ಬೇಕರಿ ಲೈನ್, ಭಟ್ಟರ ಲೈನ್, ನಾಶಿಯವರ ಲೈನ್, ಶಾಮ್ ಕುಲಕರ್ಣಿ ಲೈನ್, ಮೂರನೇ ಕ್ರಾಸ್ ದುರ್ಗಾದೇವಿ ಲೈನ್, ದ್ಯಾಮನ ಗೌಡ್ರು ಲೈನ್, ಬರ್ದೂರ್ ಲೈನ್, ಲೋಕಜ್ಞಾನ ಅವರ ಲೈನ್, ವಸ್ತದವರು- ಕರಡಿಯವರ ಲೈನ್, ಒಂದನೇ ಕ್ರಾಸ್ ಗೊಬ್ಬುರ್ ಲೈನ್, ಕಿರೆಸೂರ್ ಲೈನ್, ಜೆಟಿ ಕಾಲೇಜ್ ಲೈನ್, ಮುಧೋಳ ಲೈನ್, ಮಾಲಿಪಾಟೀಲ್ ಗುಳೇದಾರ್ ಲೈನ್, ಅರಸಿದ್ಧಿ ಯವರ ಲೈನ್,

ವಾರ್ಡ್ ನಂಬರ್. 5 ಮತ್ತು 6 ಟಿಪಿ ಗುಡಿ ಲೈನ್, ಮುಸ್ಕಿನ್ ಪ್ಲಾಟ್, ಮಾಕಾಪುರ್ ಲೈನ್, ಸರ್ವರ್ ಅವರ ಲೈನ್, ನ್ಯಾವಳ್ಳಿಯವರ್ ಲೈನ್, ಮಳಲಿ ಪೂಜಾರ್ ಲೈನ್, ವಾರ್ಡ್ ನಂಬರ್. 19, 25, 24 ಕುರುಬರ ಗರಡಿ, ಮಾಬುಸುಬಾನಿ ಕಟ್ಟಿ, ಕೊಪ್ಪದವರ್ ಲೈನ್, ಖಾನತೋಟ ಭಾಗ-1 ಹಾಳದಿಬ್ಬ ಭಾಗ-1,2,3,4 ಅಬ್ಬಿಗೇರಿ ಲೈನ್, ಕರುಗಲ್ಲ ಓಣಿ, ಪುಣೇಕರ ಲೈನ್, ಜಿ ಎಸ್ ಹಿರೇಮಠ್ ಲೈನ್, ಮದ್ಲಿ ಓಣಿ, ಹಳೆ ಲೈನ್, ಜೀರ್ ಓಣಿ, ಗಣಪತಿ ಗುಡಿ, ಹನುಮಾನ ಗರಡಿ, ಜವಳಿ ಬಜಾರ್ ತಾಂತ್ರಿಕವಾಗಿ ನೀರು ಪೂರೈಕೆಯಲ್ಲಿ ಒಂದು ವೇಳೆ ಅಡತಡೆಯಾದಲ್ಲಿ ಸಾರ್ವಜನಿಕರು ನಗರಸಭೆಯೊಂದಿಗೆ ಸಹಕರಿಸಬೇಕೆಂದು ನಗರಸಭೆ ಪೌರಾಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ನೀರು ಪೂರೈಕೆಯಲ್ಲಿ ವ್ಯತ್ಯಯ

■ ವಿಜಯಸಾಕ್ಷಿ ಸುದ್ದಿ, ಗದಗ

ಗದಗ ಜಿಲ್ಲೆಯ ಕರ್ನಾಟಕ ಪ್ರಸರಣ ನಿಗಮ ನಿಯಮಿತ ವತಿಯಿಂದ ಬಾಗೇವಾಡಿ ಗ್ರಾಮದಲ್ಲಿ ಉಪಕೇಂದ್ರ ನಿರ್ಮಾಣ ಕಾಮಗಾರಿ ಮಾಡುತ್ತಿರುವುದರಿಂದ ಸದರಿ ವಿದ್ಯುತ್ 110/33/11 ಕೆ.ವಿ ಮಾರ್ಗವನ್ನು ಸೆಪ್ಟಂಬರ್ 26 & 30 ರಂದು ಬೆಳಿಗ್ಗೆ 10 ಗಂಟೆಯಿಂದ ಸಂಜೆ 5:30ರವರೆಗೆ ಸ್ಥಗಿತಗೊಳಿಸುವುದರಿಂದ ಗದಗ, ಮುಂಡರಗಿ, ಶಿರಹಟ್ಟಿ ತಾಲೂಕು ವ್ಯಾಪ್ತಿಯ 212 ಜನವಸತಿಗಳಿಗೆ ಹಾಗೂ ಮುಂಡರಗಿ ಪಟ್ಟಣಕ್ಕೆ ನೀರು ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಲಿದೆ. ಸಾರ್ವಜನಿಕರು ಸಹಕರಿಸಬೇಕೆಂದು ಕಾರ್ಯನಿರ್ವಾಹಕ ಇಂಜಿನಿಯರ್ ಗ್ರಾಮೀಣ ಕುಡಿಯುವ ನೀರು & ನೈರ್ಮಲ್ಯ ವಿಭಾಗ ಗದಗ ಇವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಆಕ್ಷೇಪಣೆಗೆ ಅಕ್ಟೋಬರ್ 4 ಕೊನೆಯ ದಿನ

■ ವಿಜಯಸಾಕ್ಷಿ ಸುದ್ದಿ, ಗದಗ

ರಾಷ್ಟ್ರೀಯ ಆರೋಗ್ಯ ಅಭಿಯಾನದಡಿಯಲ್ಲಿ ಎನ್ಪಿಪಿಸಿ ಕಾರ್ಯಕ್ರಮದಡಿಯಲ್ಲಿ ಹೊಸದಾಗಿ ಮಂಜೂರಾದ 08 ಶುಶ್ರೂಷಕಿ ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ, ರೋಸ್ಟರ್ ಕಂ ಮೆರಿಟ್ ಆಧಾರದ ಮೇಲೆ, ನಿಬಂಧನೆಗೊಳಪಟ್ಟು ಅರ್ಹ ಅಭ್ಯರ್ಥಿಗಳಿಂದ 31.03.2024 ರವರೆಗೆ ನೇಮಕಾತಿ ಮಾಡಲು ಈಗಾಗಲೇ ಪತ್ರಿಕಾ ಪ್ರಕಟಣೆ ನೀಡಿ, ನೇರ ಸಂದರ್ಶನ ಏರ್ಪಡಿಸಿ ನೇಮಕಾತಿ ಸಮಿತಿ ಸಭೆಯಲ್ಲಿ ರೋಸ್ಟರ್ ಕಂ ಮೆರಿಟ್ ಆಧಾರದ ಮೇಲೆ ಶುಶ್ರೂಷಕಿ ಹುದ್ದೆಯನ್ನು ಆಯ್ಕೆ ಮಾಡಿ, ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಾರ್ಯಾಲಯದ ಸೂಚನಾ ಫಲಕಕ್ಕೆ ಲಗತ್ತಿಸಲಾಗಿದೆ. ಸದರಿ ಆಯ್ಕೆ ಪ್ರಕ್ರಿಯೆಗಳ ಕುರಿತು ಏನಾದರೂ ಆಕ್ಷೇಪಣೆಗಳಿದ್ದಲ್ಲಿ ಅಕ್ಟೋಬರ್ 4 ರವರೆಗೆ ಕಾರ್ಯಾಲಯದ ವೇಳೆಯಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು, ಗದಗ ಇವರಿಗೆ ಸಲ್ಲಿಬಹುದಾಗಿದೆ. ಯಾವುದೇ ಆಕ್ಷೇಪಣೆಗಳು ಬರದೇ ಇದ್ದ ಪಕ್ಷದಲ್ಲಿ ಆಯ್ಕೆಯಾದ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ನೀಡಲಾಗುವುದು ಎಂದು ಗದಗ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಜನ ಸಂಪರ್ಕ ಕಾರ್ಯಾಲಯ ಉದ್ಘಾಟಿಸಿದ ಶಾಸಕ ಜಿ.ಎಸ್. ಪಾಟೀಲ

## ಸಾರ್ವಜನಿಕರ ಸಮಸ್ಯೆಗಳಿಗೆ ಸ್ಥಳದಲ್ಲೇ ಸ್ಪಂದನೆ

■ ವಿಜಯಸಾಕ್ಷಿ ಸುದ್ದಿ, ರೋಣ

ಸಮಸ್ಯೆಗಳನ್ನು ಹೊತ್ತು ತಂದ ಕ್ಷೇತ್ರದ ಜನತೆಗೆ ಶಾಸಕ ಜಿ.ಎಸ್ ಪಾಟೀಲ ಸ್ಥಳದಲ್ಲಿಯೇ ಸ್ಪಂದಿಸಿ ಪರಿಹಾರ ಕೊಡಿಸುವ ಮೂಲಕ ಜನರಲ್ಲಿ ಹೊಸ ಬೆಳಕನ್ನು ಚೆಲ್ಲುವ ಮುಖೇನ ಕ್ಷೇತ್ರದ ಜನರಲ್ಲಿ ಹೊಸ ಆಶಾಭಾವನೆಯನ್ನು ಮೂಡಿಸಿದ್ದಾರೆ.

ಅವರು ಸೋಮವಾರ ಪಟ್ಟಣದ ಬಸ್ ನಿಲ್ದಾಣದ ಬಳಿ ಲೋಕೋಪಯೋಗಿ ಇಲಾಖೆಯ ಆವರಣದಲ್ಲಿರುವ ಶಾಸಕರ ಜನ ಸಂಪರ್ಕ ಕಾರ್ಯಾಲಯವನ್ನು ಉದ್ಘಾಟಿಸಿ, ಸಾರ್ವಜನಿಕರ ಅಹವಾಲುಗಳನ್ನು ಸ್ವೀಕರಿಸಿ, ಸ್ಥಳದಲ್ಲಿಯೇ ಬಗೆಹರಿಸುವ ಪ್ರಯತ್ನವನ್ನು ಮಾಡಿದರು.



ಕ್ಷೇತ್ರದಿಂದ ನೂರಾರು ಸಂಖ್ಯೆಯಲ್ಲಿ ಆಗಮಿಸಿದ್ದ ಸಾರ್ವಜನಿಕರು ಹತ್ತಾರು ಸಮಸ್ಯೆಗಳನ್ನು ತಂದಿದ್ದರು. ಇದನ್ನರಿತ ಶಾಸಕ ಜಿ.ಎಸ್ ಪಾಟೀಲ ತಾಳ್ಮೆಯಿಂದ ಪ್ರತಿಯೊಬ್ಬರ ಸಮಸ್ಯೆಗಳನ್ನು ಆಲಿಸುವ ಮೂಲಕ ಅಧಿಕಾರಿಗಳನ್ನು ಸಂಪರ್ಕಿಸಿ ಸಮಸ್ಯೆಗಳನ್ನು ಬಗೆಹರಿಸಬೇಕು ಎಂದು ಸೂಚಿಸಿದರು.

> ಆರೋಗ್ಯ ಸಮಸ್ಯೆಯಿಂದ ಬಳಲುತ್ತಿದ್ದ ಮಹಿಳೆಯೊಬ್ಬರ ಸಂಬಂಧಿಕರು ಆಸ್ಪತ್ರೆಯ ವೈದ್ಯರ ನಿಷ್ಕಾಳಜಿಯಿಂದ ತೊಂದ-ರೆಗೀಡಾದ ಕುರಿತು ಅಳಲು ತೋಡಿಕೊಂಡರು. ದೂರವಾಣಿ ಮೂಲಕ ವೈದ್ಯರನ್ನು ಸಂಪರ್ಕಿಸಿದ ಶಾಸಕರು, ಈ ಕೂಡಲೇ ಅನಾರೋಗ್ಯ ಪೀಡಿತ ಮಹಿಳೆಗೆ ಸೂಕ್ತ ಚಿಕಿತ್ಸೆಯನ್ನು ನೀಡಬೇಕು. ಚಿಕಿತ್ಸೆ ನೀಡಿದ ನಂತರ ವಿವರಣೆಯನ್ನು ಕೊಡಬೇಕು. ಆಸ್ಪತ್ರೆಗಳಿಗೆ ಬರುವ ಪ್ರತಿಯೊಬ್ಬ ರೋಗಿಗೂ ಸೂಕ್ತ ಚಿಕಿತ್ಸೆಯನ್ನು ಒದಗಿಸಬೇಕು, ಮುಂದಿನ ದಿನಗಳಲ್ಲಿ ಇಂತಹ ಅಪಾದನೆಗಳು ಬರದಂತೆ ಎಚ್ಚರ ವಹಿಸಿ ಎಂದು ಸರಕಾರಿ ಆಸ್ಪತ್ರೆಯ ವೈದ್ಯರೊಬ್ಬರಿಗೆ ಸೂಚಿಸಿದರು.

> ಶಾಸಕರು ಮತಕ್ಷೇತ್ರದಲ್ಲಿಯೇ ಇರುವ ಸಂದರ್ಭದಲ್ಲಿ ಸದರಿ ಜನಸಂಪರ್ಕ ಕಾರ್ಯಾಲಯದಲ್ಲಿರುತ್ತಾರೆ. ಹೀಗಾಗಿ, ಮತಕ್ಷೇತ್ರದ ಜನರು ಜನಸಂಪರ್ಕ ಕಾರ್ಯಾಲಯಕ್ಕೆ ಆಗಮಿಸಿ, ಶಾಸಕರನ್ನು ಭೇಟಿಯಾಗಬಹುದು ಎಂದು ಶಾಸಕರ ಜನಸಂಪರ್ಕ ಕಾರ್ಯಾಲಯದ ಆಪ್ತ ಸಹಾಯಕರು ತಿಳಿಸಿದರು.

ಒಟ್ಟಿನಲ್ಲಿ ಜನಸಂಪರ್ಕ ಕಾರ್ಯಾಲಯದ ಉದ್ಘಾಟನೆ ಸಂದರ್ಭದಲ್ಲಿ ಸಾರ್ವಜನಿಕರ ಹತ್ತಾರು ಸಮಸ್ಯೆಗಳು ಅಲ್ಲಿಯೇ ಬಗೆಹರಿದಿದ್ದು ಜನರಲ್ಲಿ ಹೊಸ ಚೈತನ್ಯವನ್ನು ಮೂಡಿಸಿತು.

ಐ.ಎಸ್ ಪಾಟೀಲ, ವ್ಹಿ.ಆರ್ ಗುಡಿಸಾಗರ, ಮಿಥುನ್ ಪಾಟೀಲ, ಪರಶುರಾಮ ಅಳಗವಾಡಿ, ವೀರಣ್ಣ ಶೆಟ್ಟರ, ವ್ಹಿ.ಬಿ ಸೋಮನಕಟ್ಟಿಮಠ, ಯೂಸುಪ್ ಇಟಗಿ, ಅಂದಪ್ಪ ಬಿಚ್ಚೂರ, ಸಂಗು ನವಲಗುಂದ, ಅಪ್ಪು ಗಿರಡ್ಡಿ, ಅರ್ಜುನ ಕೊಪ್ಪಳ, ಸಂಜಯ ದೊಡ್ಡಮನಿ, ಮೌನೇಶ ಹಾದಿಮನಿ, ಬಾವಾಸಾಬ ಬೆಟಗೇರಿ, ಇಸ್ಮಾಯಿಲ್ ಹೊರಪೇಟಿ, ಮಲ್ಲು ರಾಯನಗೌಡ್ರ ಸೇರಿದಂತೆ ಮುಖಂಡರು, ಕಾರ್ಯಕರ್ತರು ಉಪಸ್ಥಿತರಿದ್ದರು.

## ಡಾ. ಪಂ.ಪುಟ್ಟರಾಜ ಕವಿ ಗವಾಯಿಗಳರವರ ಭಾವಚಿತ್ರ ಮೆರವಣಿಗೆ



■ ವಿಜಯಸಾಕ್ಷಿ ಸುದ್ದಿ, ಗದಗ

ಗಾನಯೋಗಿ ಡಾ. ಪಂ. ಪುಟ್ಟರಾಜ ಸೇವಾ ಸಮಿತಿ ವತಿಯಿಂದ ಹಮ್ಮಿಕೊಂಡಿದ್ದ ಪದ್ಮಭೂಷಣ ಡಾ. ಪಂ.ಪುಟ್ಟರಾಜ ಕವಿ ಶಿವಯೋಗಿಗಳವರ 13ನೇ ಪುಣ್ಯಸ್ಮರಣೋತ್ಸವ ನಿಮಿತ್ತ ವಿವಿಧ ಕಾರ್ಯಕ್ರಮಗಳು ನಗರದ ವೀರೇಶ್ವರ ಪುಣ್ಯಾಶ್ರಮದಲ್ಲಿ ಸೋಮವಾರ ಜರುಗಿತು.

ಬೆಳಿಗ್ಗೆ 9 ಗಂಟೆಗೆ ಡಾ. ಪಂ.ಪುಟ್ಟರಾಜ ಕವಿ ಶಿವಯೋಗಿಗಳವರ ಭಾವಚಿತ್ರದ ಮೆರವಣಿಗೆಗೆ ವಿರೇಶ್ವರ ಪುಣ್ಯಾಶ್ರಮದ ಪೂಜ್ಯರಾದ ಶ್ರೀ ಕಲ್ಲಯ್ಯಜ್ಜನವರು ನಗಾರಿ ಬಾರಿಸುವುದರ ಮೂಲಕ ಚಾಲನೆ ನೀಡಿದರು. ಮೆರವಣಿಗೆಯು ವಿರೇಶ್ವರ ಪುಣ್ಯಾಶ್ರಮದಿಂದ ಭೂಮರಡ್ಡಿ ಸರ್ಕಲ್‌ನಲ್ಲಿರುವ ಶ್ರೀ ಪಂಡಿತ ಪುಟ್ಟರಾಜ ಗವಾಯಿಗಳರವರ ಪುತ್ಥಳಿಗೆ ಮಾಲಾರ್ಪಣೆ ಮಾಡಿ ಮುಂದೆ ನಗರದ ಪ್ರಮುಖ ಬೀದಿಗಳಲ್ಲಿ ಸಂಚರಿಸಿತು.

ಈ ಸಂದರ್ಭದಲ್ಲಿ ಸಿದ್ದೇಶ್ವರ ಶಾಸ್ತ್ರಿಗಳು ತೆಲ್ಲೂರ, ಬಸವರಾಜ ಹೊನ್ನಿಗನೂರ, ಬೆಟದಯ್ಯಶಾಸ್ತ್ರಿಗಳು ಹಿರೇಮ್ಯಾಗೇರಿ, ಆರ್. ಶರಣಬಸವ ಶಾಸ್ತ್ರಿಗಳು ಇಲಕಲ್ಲ, ರಘುನಂದನ ಶಾಸ್ತ್ರೀಗಳು ಅರಳಗುಂಡಗಿ, ಶರಣಯ್ಯ ಶಾಸ್ತ್ರಿಗಳು ಅಗಸಬಾಳ, ಸದಾನಂದ ಶಾಸ್ತ್ರಿಗಳು ಹರ್ಲಾಪೂರ, ಎಂ.ಜಿ ಗುರುಸಿದ್ದೇಶ್ವರ ಶಾಸ್ತ್ರಿಗಳು ಬೇವೂರು, ಶರಣಶ್ರೀ ಶಿವಲಿಂಗಯ್ಯಶಾಸ್ತ್ರಿಗಳು ಸಿದ್ದಾಪೂರ, ಹೇಮರಾಜ ಶಾಸ್ತ್ರಿಗಳು ಹೆಡಿಗ್ಗೊಂಡ, ಶಿವಾನಂದೀಶ್ವರ ಶಾಸ್ತ್ರಿಗಳು ಹನಮನಾಳ, ಮಡಿವಾಳಯ್ಯ ಶಾಸ್ತ್ರಿಗಳು ಜೀರಟಗಿ, ಶರಣಬಸವ ಶಾಸ್ತ್ರಿಗಳು ಮನ್ನೇರಾಳ, ಗುರುಸಿದ್ದೇಶ್ವರ ಶಾಸ್ತ್ರಿಗಳು ಯಲ್ಲಾಪೂರ, ಸಂಗಮೇಶ ಕುಂಬಾರ ಕರಡಕಲ್, ಗವಿಸಿದ್ದೇಶ್ವರ ಶಾಸ್ತ್ರಿಗಳು ಬೂದಿಹಾಳ, ಸಂಗಮೇಶ ಗವಾಯಿಗಳು ಪಾಟೀಲ, ಉಪಸ್ಥಿತರಿದ್ದರು.

### ಬಿಜೆಪಿ ಕಾರ್ಯಾಲಯದಲ್ಲಿ ಪಂ.ದೀನದಯಾಳ ಉಪಾಧ್ಯಾಯರ ಜನ್ಮ ದಿನಾಚರಣೆ

## ಯುವಕರು ದೇಶ ಕಟ್ಟುವ ಕಾರ್ಯಕ್ಕೆ ಕೈ ಜೋಡಿಸಿ

■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಭಾರತದ ಅಖಂಡತೆ, ಏಕತೆ, ಅಭ್ಯುದಯಕ್ಕಾಗಿ ತಮ್ಮನ್ನೇ ಸಮರ್ಪಿಸಿಕೊಂಡ ಭಾರತ ಮಾತೆಯ ಸುಪುತ್ರ ಪಂಡಿತ ದೀನಯಾಳ ಉಪಾಧ್ಯಾಯರ ಚಿಂತನೆ, ಆದರ್ಶ, ಮೌಲ್ಯಗಳು ಸಾರ್ವಕಾಲಿಕ ಸತ್ಯಗಳಾಗಿವೆ ಎಂದು ಶಾಸಕ ಡಾ.ಚಂದ್ರು ಲಮಾಣಿ ಹೇಳಿದರು.

ಅವರು ಸೋಮವಾರ ಪಟ್ಟಣದ ಬಿಜೆಪಿ ಕಾರ್ಯಾಲಯದಲ್ಲಿ ಬಿಜೆಪಿ ಮಂಡಳ ಮತ್ತು ನಗರ ಘಟಕದಿಂದ ಆಚರಿಸಲಾದ ಪಂ.ದೀನದಯಾಳ ಉಪಾಧ್ಯಾಯರ ಜನ್ಮ ದಿನಾಚರಣೆ ಕಾರ್ಯಕ್ರಮದಲ್ಲಿ ಅವರ ಭಾವಚಿತ್ರಕ್ಕೆ ಪುಷ್ಪ ಸಮರ್ಪಿಸಿ ಮಾತನಾಡಿ, ಉಪಾಧ್ಯಾಯರ ಆಸೆ, ಕನಸಿನಂತೆ ಇಂದು ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಸರ್ಕಾರ ದೇಶದ ಸರ್ವತೋಮುಖ ಪ್ರಗತಿಗಾಗಿ ಶ್ರಮಿಸುತ್ತಿದೆ. ಪ್ರತಿಯೊಬ್ಬ ಭಾರತೀಯನೂ ಸ್ವಾಭಿಮಾನದ ಜೀವನ ಸಾಗಿಸುವಂತಾಗಬೇಕು. ಸದೃಢ, ಸಶಕ್ತ ರಾಷ್ಟ್ರ ನಿರ್ಮಾಣವಾಗಬೇಕು ಎಂಬುದು ಉಪಾಧ್ಯಾಯರ ಕನಸಾಗಿತ್ತು. ಅವರ ಅದ್ಭುತವಾದ ಚಿಂತನೆ, ವಿಚಾರಧಾರೆಗಳೊಂದಿಗೆ ಯುವಕರು ದೇಶ ಕಟ್ಟುವ ಕಾರ್ಯಕ್ಕೆ ಕೈ ಜೋಡಿಸಬೇಕು ಎಂದರು.

ಮಂಡಳದ ಪ್ರಧಾನ ಕಾರ್ಯದರ್ಶಿ ಗಂಗಾಧರ ಮೆಣಸಿನಕಾಯಿ, ಕೆಸಿಸಿ ಬ್ಯಾಂಕ್ ಅಧ್ಯಕ್ಷ ಮಲ್ಲಿಕಾರ್ಜುನ ಹೊರಕೇರಿ, ನಿರ್ದೇಶಕ ಸುನೀಲ ಮಹಾಂತಶೆಟ್ಟರ, ಸೋಮಣ್ಣ ಉಪನಾಳ, ಬಸವರಾಜ ಪಲ್ಲೇದ ಮುಂತಾದವರು ಮಾತನಾಡಿದರು.

ಕಾರ್ಯಕ್ರಮದಲ್ಲಿ ಪುರಸಭೆ ಮಾಜಿ ಅಧ್ಯಕ್ಷ ಎಂ.ಆರ್ ಪಾಟೀಲ, ಎಪಿಎಂಸಿ ಮಾಜಿ ಅಧ್ಯಕ್ಷ ನೀಲಪ್ಪ ಹತ್ತಿ, ವಿಜಯ ಹತ್ತಿಕಾಳ, ವಿಜಯ ಬೂದಿಹಾಳ, ರಮೇಶ್ ಹಾಳತೋಟದ, ಉಳವೇಶಗೌಡ ಪಾಟೀಲ, ನಿಂಗಪ್ಪ ಬನ್ನಿ, ನಿಂಗಪ್ಪ ಪ್ಯಾಟಿ, ತುಕ್ಕಪ್ಪ ಪೂಜಾರ, ಪ್ರವೀಣ ಕುಲಕರ್ಣಿ, ಸಂತೋಷ ಜಾವೂರ, ರಾಮು ನಾಯಕ, ಆಕಾಶ ಸೌದತ್ತಿ, ಶಿವಯ್ಯ ಮಠಪತಿ, ಫಕ್ಕಿರೇಶ ಲಮಾಣಿ, ಮಂಜುನಾಥ ಗಜಾಕೋಶ, ವಿಶಾಲ ಬಟಗುರ್ಕಿ, ಮಂಜುನಾಥ ಉಳ್ಳಾಗಡ್ಡಿ, ಪ್ರವೀಣ ಪಾಟೀಲ, ರಾಜುರೆಡ್ಡಿ ಬೊಮ್ಮನಕಟ್ಟಿ, ಪ್ರಕಾಶ ಮೇವುಂಡಿ, ಪಕ್ಷದ ಪದಾಧಿಕಾರಿಗಳು, ಹಿರಿಯರು, ಗಣ್ಯರು, ಬೂತ್ ಅಧ್ಯಕ್ಷರು, ಕಾರ್ಯಕರ್ತರು ಉಪಸ್ಥಿತರಿದ್ದರು. ಅಧ್ಯಕ್ಷ ದುಂಡೇಶ ಕೊಟಗಿ ನಿರೂಪಿಸಿದರು.



## ಸಾಕ್ಷಿ ಸುಭಾಷಿತ

**ದೊಡ್ಡವರ ಸಮಸ್ಯೆಗಳನ್ನು ಪ್ರಪಂಚ ಹಿಗ್ಗಿಸಿ ಬೃಹದಾಕಾರದಲ್ಲಿ ತೋರಿಸುತ್ತದೆ. ಆದರೆ, ಬಡವರ ದುಃಖವನ್ನು ಯಾರೂ ಗಮನಿಸುವುದಿಲ್ಲ!**

**–ಆಲಿವರ್ ಗೋಲ್ಡ್‌ಸ್ಮಿತ್**

## ಸಂಪಾದಕೀಯ

# ಮದ್ಯ ಭಾಗ್ಯ ಕಾಂಗ್ರೆಸ್ಸಿನ 6ನೇ ಗ್ಯಾರಂಟಿ

ರಾಜ್ಯ ಕಾಂಗ್ರೆಸ್ ಸರಕಾರ 5 ಪ್ರಮುಖ ಗ್ಯಾರಂಟಿ ಕಾರ್ಯಕ್ರಮಗಳ ಮೂಲಕ ಕ್ರಾಂತಿಕಾರಕ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಿದೆ. ಅದರಲ್ಲೂ ಶಕ್ತಿ, ಗೃಹಲಕ್ಷ್ಮೀ, ಗೃಹ ಜ್ಯೋತಿ ಕಾರ್ಯಕ್ರಮಗಳ ಮೂಲಕ ಮಹಿಳಾ ಸಬಲೀಕರಣ ಕಾರ್ಯಕ್ರಮಗಳನ್ನು ನೀಡಿ ಗಮನ ಸೆಳೆದಿದೆ.

ರಾಜ್ಯದ ಮಹಿಳೆಯರಿಗೆ ಆರ್ಥಿಕ, ಸಾಮಾಜಿಕ ಬಲ ತುಂಬುವ ಕೆಲಸ ಮಾಡಿದ ಸರಕಾರ ಈಗ ಅವರಿಗೆ ದೌರ್ಭಾಗ್ಯ ಕರುಣಿಸುವಂಥ ಕೆಲಸಕ್ಕೆ ಕೈಹಾಕಿದೆ. ಗ್ರಾಮ ಪಂಚಾಯಿತಿಗೊಂದು ಅಥವಾ 3 ಸಾವಿರ ಜನಸಂಖ್ಯೆ ಇರುವ ಪ್ರದೇಶಕ್ಕೊಂದು ಮದ್ಯದಂಗಡಿ ತೆರೆಯುವ ಕೆಲಸಕ್ಕೆ ಮುಂದಾಗಿರುವುದು ವ್ಯಾಪಕ ಟೀಕೆಗೆ ಗುರಿಯಾಗಿದೆ.

ಮದ್ಯಪಾನದಿಂದ ಸಮಾಜದ ಮೇಲೆ ಆಗುತ್ತಿರುವ ದುಷ್ಪರಿಣಾಮದ ಅರಿವಿದ್ದರೂ ರಾಜ್ಯ ಕಾಂಗ್ರೆಸ್ ಸರಕಾರ ಗ್ರಾಮ ಪಂಚಾಯಿತಿಗೊಂದು ಮದ್ಯದಂಗಡಿ ತೆರೆಯಲು ಹೊರಟಿರುವುದು ವಿಪರ್ಯಾಸ. ಮಹಾತ್ಮಾ ಗಾಂಧೀಜಿ ಅವರ ಮದ್ಯಮುಕ್ತ ಸಮಾಜ ನಿರ್ಮಾಣದ ಕನಸು ನನಸು ಮಾಡಬೇಕಾದ ಪಕ್ಷ ಇವತ್ತು ರಾಜ್ಯಾದ್ಯಂತ ಮದ್ಯದಂಗಡಿ ತೆರೆಯಲು ಹೊರಟಿರುವುದು ವಿಪರ್ಯಾಸ.

ಮದ್ಯ ಸೇವನೆ ದುಷ್ಚಟಕ್ಕೆ ಬಲಿಯಾಗಿ ಸಾವಿರಾರು ಯುವಕರು ದಾರಿ ತಪ್ಪುತ್ತಿದ್ದಾರೆ. ಇನ್ನು ಸುಲಭಕ್ಕೆ ಮದ್ಯ ಸಿಗುವಂತಾದರೆ ಇಡೀ ರಾಜ್ಯವೇ ಮದ್ಯಯುಕ್ತವಾಗುವುದರಲ್ಲಿ ಸಂದೇಹವೇ ಇಲ್ಲ. ಸರಕಾರ ಅಬಕಾರಿ ಸುಂಕದ ಮೇಲೆ ನಿರ್ಭರವಾಗಿರುವುದು ಎಲ್ಲರಿಗೂ ಗೊತ್ತಿರುವ ವಿಚಾರ. ಆದರೆ ಅಬಕಾರಿ ಆದಾಯವನ್ನು ದ್ವಿಗುಣ ಮಾಡಲು, ಸರಕಾರ ಆರ್ಥಿಕವಾಗಿ ಸಶಕ್ತಗೊಳ್ಳಲು ಗ್ರಾಮ ಪಂಚಾಯಿತಿಗೊಂದು ಮದ್ಯದಂಗಡಿ ತೆರೆಯುವ ನಿರ್ಧಾರ ಕೈಗೊಳ್ಳುವುದು ಸೂಕ್ತವಲ್ಲ.

ಸರಕಾರ ಹೊಸ ಮದ್ಯದಂಗಡಿ ತೆರೆಯಲು ಪರವಾನಗಿ ನೀಡುವುದನ್ನು ನಿಲ್ಲಿಸಬೇಕು. ಯಾವುದೇ ಹೊಸ ಮದ್ಯದಂಗಡಿ ತೆರೆಯುವ ಪ್ರಸ್ತಾವನೆಯನ್ನು ತಕ್ಷಣ ಕೈ ಬಿಡಬೇಕು. ಅದರ ಬದಲಾಗಿ ಮದ್ಯಸೇವನೆ ದುಷ್ಪರಿಣಾಮಗಳ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸುವ ಕೆಲಸ ಮಾಡಬೇಕು. ಮದ್ಯ ಸೇವನೆ ವಯಸ್ಸಿನ ಮಿತಿಯನ್ನು ಹೆಚ್ಚಳ ಮಾಡಬೇಕು. ಸರಕಾರ ಜನರ ಬದುಕನ್ನು ಸುಧಾರಣೆ ಮಾಡುವ ಕೆಲಸ ಮಾಡಬೇಕೆ ಹೊರತು, ಜನರಿಗೆ ಸಮೀಪದಲ್ಲಿಯೇ ಮದ್ಯದಂಗಡಿ ಸಿಗುವಂತೆ ಮಾಡುವುದಲ್ಲ. ಅದು ಸರಕಾರದ ಕೆಲಸವೂ ಅಲ್ಲ ಎನ್ನುವುದನ್ನು ಅರ್ಥ ಮಾಡಿಕೊಳ್ಳಬೇಕು.

ಶಕ್ತಿ, ಗೃಹ ಲಕ್ಷ್ಮೀ, ಗೃಹ ಜ್ಯೋತಿ ಕಾರ್ಯಕ್ರಮಗಳ ಮೂಲಕ ಮಹಿಳೆಯರ ಮನ ಗೆದ್ದಿರುವ ಸರಕಾರ, ಮದ್ಯ ಭಾಗ್ಯ ನೀಡಿ ಮಹಿಳೆಯರನ್ನು ಬೀದಿಗೆ ತರುವ ಕೆಲಸಕ್ಕೆ ಕೈ ಹಾಕಬಾರದು.

# ಚಿತ್ರರಂಗಕ್ಕೆ ಚಿತ್ರಕ್ಕನ ಎಂಟ್ರಿ..!

ಬಹುಶಃ ಮಾಧ್ಯಮ ಕ್ಷೇತ್ರದಲ್ಲಿ ಅದರಲ್ಲೂ ದೃಷ್ಯ ಮಾಧ್ಯಮ ಕ್ಷೇತ್ರದಲ್ಲಿ ಚಿತ್ರಕ್ಕನ ಹೆಸರು ಬಹುತೇಕರಿಗೆ ಪರಿಚಯ ಇದ್ದದ್ದೆ. ಚಿತ್ರಕ್ಕ ಯಾವ ಚಿತ್ರಕ್ಕ ಅಂತಾನೂ ಸ್ವಲ್ಪ ಜನರಲ್ಲಿ ಗೊಂದಲ ಇರಬಹುದು. ಅದೇ ರೀ ನಿಮ್ ಚಿತ್ರಕಲಾ ಪಟ್ರಾಮೆ ಅವ್ರು ಅಂತ ಹೇಳಿದ್ರೆ ಎಲ್ಲರಿಗೂ ಗೊತ್ತಾಗುತ್ತೆ. ಅದೆಷ್ಟೋ ಜ್ಯೂನೀಯರ್ಸ್ ಗಳಿಗೆ ಚಿತ್ರಕಲಾ, ಚಿತ್ರಕ್ಕಾನೆ. ಇನ್ನು ಕೆಲವರಿಗೆ ಚಿತ್ರಾ ಮೇಡಂ. ಅಂದ್ಹಾಗೆ ಯಾಕೆ ಚಿತ್ರಕಲಾ ಅವರ ಬಗ್ಗೆ ಈ ಮಾತು ಅಂತಾನೂ ಕೆಲವರ ಸಂದೇಹವಿರಬಹುದು ಅಲ್ವಾ?

ಹೌದು ಚಿತ್ರಕಲಾ ಕೆಲವು ಪತ್ರಿಕೆ ಸೇರಿದಂತೆ ನಾಡಿನ ಪ್ರತಿಷ್ಠಿತ ಸುದ್ದಿ ವಾಹಿನಿಗಳಲ್ಲಿ ಕೆಲಸ ಮಾಡಿದವರು. ಮಾಧ್ಯಮ ಕ್ಷೇತ್ರಕ್ಕೆ ತಮ್ಮದೆ ಕೊಡುಗೆ ನೀಡಿದವರು. ಈಗ ನಮ್ ಚಿತ್ರಕ್ಕೆ ಬಣ್ಣ ಹಚ್ಚಿಕೊಂಡು ಚಿತ್ರರಂಗಕ್ಕೆ ಎಂಟ್ರಿ ಕೊಟ್ಟಿದ್ದಾರೆ.

ಈಗಾಗಲೇ ಈ ಹಿಂದೆ ಕತ್ತಲಕೋಣೆಯಲ್ಲಿ ಬಣ್ಣ ಹಚ್ಚಿದ್ದ ಚಿತ್ರಕ್ಕ ಹಲವು ಕಾರಣದಿಂದ ನಿರೀಕ್ಷೆಯಂತೆ ಚಿತ್ರ ಯಶಸ್ಸು ಕಾಣಲಿಲ್ಲ. ಹೀಗಾಗಿ ಚಿತ್ರಕ್ಕ ಬಣ್ಣ ಹಚ್ಚಿದ್ದು ಬಹುತೇಕರಿಗೆ ಗೊತ್ತೆ ಆಗಲಿಲ್ಲ. ಆದ್ರೆ ಈ ಬಾರಿ ಮಾತ್ರ ಹಾಗಿಲ್ಲ, ಸದ್ಯ ಭಾರೀ ನಿರೀಕ್ಷೆ ಮೂಡಿಸಿದ ಇನಾಮ್ದಾರ ಚಿತ್ರದಲ್ಲಿ ಚಿತ್ರಕ್ಕನದೊಂದು ಸ್ಪೆಷಲ್ ಕ್ಯಾರೆಕ್ಟರ್ ಇದೆ. ಈ ಚಿತ್ರಕ್ಕೆ ನಟ, ನಿರ್ದೇಶಕ ಸಂದೇಶ ಶೆಟ್ಟಿ ಆಜ್ರಿ




ಆ್ಯಕ್ಷನ್ ಕಟ್ ಹೇಳಿದ್ದಾರೆ. ಉತ್ತರ ಕರ್ನಾಟಕದ ಪ್ರತಿಭೆ ರಂಜನ್ ಛತ್ರಪತಿ ಈ ಚಿತ್ರದ ನಾಯಕ. ಎಸ್ತಾರ್ ನೆರೋನಾ, ಚಿರಶ್ರೀ ಅಂಚನ್ ನಾಯಕಿಯರಾಗಿ ತೆರೆಮೇಲೆ ಕಾಣಲಿದ್ದಾರೆ. ಈ ಸಿನಿಮಾದ ನಿರ್ಮಾಣವನ್ನು ನಿರಂಜನ್ ಶೆಟ್ಟಿ ತಲ್ಲೂರ್ ಕುಂತಿಯಮ್ಮ ಪ್ರೊಡಕ್ಷನ್ ಮತ್ತು ತಸ್ಮಯ್ ಪ್ರೊಡಕ್ಷನ್ ಮೂಲಕ ನಿರ್ಮಿಸಿದ್ದಾರೆ.

ಇನ್ನೇನು ಚಿತ್ರ ಪೂರ್ಣ ಪ್ರಮಾಣದಲ್ಲಿ ಚಿತ್ರೀಕರಣ ಮುಗಿಸಿದೆ. ಕೆಲವೇ ದಿನಗಳಲ್ಲಿ ತೆರೆ ಕಾಣಲಿದ್ದು ಪ್ರೇಕ್ಷಕ ಪ್ರಭುಗಳಲ್ಲಿ ಹಲವು ನಿರೀಕ್ಷೆ ಮೂಡಿಸಿದೆ. ಚಿತ್ರದ ಕಥೆಯ ತಿರುಳು ಸಂಪೂರ್ಣವಾಗಿ ಹೇಳದ ಚಿತ್ರತಂಡ ಸ್ವಲ್ಪ ಸಸ್ಪೆನ್ಸ್ ಕಾಪಾಡಿಕೊಂಡಿದೆ. ಆದ್ರೆ ಇನಾಮ್ದಾರನ ಟ್ಯಾಗ್ ಲೈನ್ ಕಪ್ಪು ಸುಂದರಿಯ ಸುತ್ತ ಅನ್ನೋದು ಮಾತ್ರ ಹಲವು ಚರ್ಚೆಯನ್ನು ಹುಟ್ಟು ಹಾಕಿದೆ. ಹೌದು, ಇದೇನು ಈ ಚಿತ್ರ ನಾಯಕಿ ಪ್ರಧಾನವಾ? ಅಥವಾ ಯಾರು ಆ ಕಪ್ಪು ಸುಂದರಿ? ಕಪ್ಪು ಸುಂದರಿಯ ಸುತ್ತ ಏನೆಲ್ಲ ಇದೆ? ಮತ್ತೆ ಚಿತ್ರಕ್ಕೆ ಇನಾಮ್ದಾರ ಅಂತ ಹೆಸರಿದೆ. ಅಂದರೆ ಇನಾಮ್ದಾರ ಮನೆತನದ ಕುರಿತ ಚಿತ್ರಾನಾ ಇದು. ಅಥವಾ ಪೋಸ್ಟರ್ ಗಳಲ್ಲಿ ಶಿವಾಜಿ ಮಹಾರಾಜನ ಚಿತ್ರವಿದೆ ಶಿವಾಜಿ ಕುರಿತಾಗಿದೆಯಾ? ಹೀಗೆ ಡಜನ್ ಗಟ್ಟಲೆ ಸಂದೇಹಗಳು ಮೂಡದೆ, ಕಾಡದೇ ಇರಲಾರವು. ಆದ್ರೆ ಮೂಲದ ಪ್ರಕಾರ ಈ ಚಿತ್ರ ಕಪ್ಪು–ಬಿಳಿಯ ಎನ್ನುವ ಎರಡು ಜನಾಂಗೀಯ ಕಥೆ ಎನ್ನಲಾಗಿದ್ದು, ಈ ಮೂಲಕ ಚಿತ್ರ ಕಥೆ, ನಿರ್ದೇಶನ ಮಾಡಿರುವ ಸಂದೇಶ, ಸಮಾಜಕ್ಕೊಂದು ಸಂದೇಶ ನೀಡಲು ಹೊರಟಿದ್ದಾರೆ ಎಂದು ಮಾತ್ರ ತಿಳಿದು ಬಂದಿದೆ.

ಪ್ರಮೋದ ಶೆಟ್ಟಿ ನಿರ್ಮಾಣದ ಈ ಚಿತ್ರದಲ್ಲಿ ಚಿತ್ರಕಲಾ ಆಕಸ್ಮಿಕವಾಗಿ ಎಂಟ್ರಿ ಪಡೆದಿದ್ದಾರಂತೆ. ಬೆಳ್ತಂಗಡಿ ತಾಲೂಕಿನ ಪಟ್ರಮೆ ಗ್ರಾಮದ ಚಿತ್ರಕಲಾ ರಾಜೇಶ್ ಅವರನ್ನು ನಿಜ ಬದುಕಲ್ಲಿ ಪತ್ರಕರ್ತೆಯಾಗಿ ನೋಡಿದವರು ಈಗ ಬೆಳ್ಳಿ ತೆರೆ–ಯ ಮೇಲೂ ನೋಡಬಹುದು. ಬದುಕಿನಲ್ಲಿ ಪ್ರತಿಯೊಂದನ್ನು ಸವಾಲಾಗಿ ಸ್ವೀಕರಿಸುವ ಚಿತ್ರಕಲಾ, ಎಂದಿಗೂ ಸೋಲನ್ನು ಮೆಟ್ಟಿನಿಂತು ಗೆಲುವಿನ ಹಾದಿಯಲ್ಲಿ ಸಾಗುವವರು, ಜೀವನದಲ್ಲಿ ಸಾಕಷ್ಟು ಎಳು, ಬೀಳುಗಳನ್ನು ಕಂಡರೂ ಎದೆಗುಂದದ ಮಹಿಳೆ. ಈ ಕಾರಣಕ್ಕಾಗಿ ಈ



ಚಿತ್ರದ ನೆಪವಾಗಿಟ್ಟುಕೊಂಡು ಚಿತ್ರಕಲಾ ಬಗ್ಗೆ ಕೆಲವೊಂದಿಷ್ಟು ವಿಚಾರ ಹಂಚಿಕೊಳ್ಳಬೇಕೆನಿಸಿತು.

ಚಿತ್ರಕಲಾ ಅವರು ಕಾಸರಗೋಡು ತಾಲೂಕಿನ ದೇಲಂಪಾಡಿಯ ಬಂದ್ಯಡ್ಕದ ರಾಜೇಶ್ ಅವರ ಪತ್ನಿ, ರಾಜ್ಯದ ಪ್ರತಿಷ್ಠಿತ ಟಿ.ವಿ. ಚಾನೆಲ್‌ಗಳಾದ ಸುದ್ದಿ, ಸುವರ್ಣ, ರಾಜ್ ನ್ಯೂಸ್, ಝೀ ಕನ್ನಡ, ಜನಶ್ರೀ, ಸರಳ ಜೀವನ ಚಾನೆಲ್‌ಗಳಲ್ಲಿ ಕೆಲಸ ನಿರ್ವಹಿಸಿದ್ದರು. ಪ್ರಸ್ತುತ ಪತಿ ಮತ್ತು ಮಕ್ಕಳೊಂದಿಗೆ ಧಾರವಾಡದಲ್ಲಿ ನೆಲೆಸಿರುವ ಇವರು ವೆಬ್‌ಸೈಟ್‌ಗಳಿಗೆ ವರ್ಕ್ ಪ್ರಂ ಹೋಮ್ ಮಾಡುತ್ತಿದ್ದಾರೆ. ಅವುಗಳ ಮಧ್ಯೆ ಇವರು ಚಿತ್ರರಂಗದಲ್ಲಿ ತೊಡಗಿಸಿಕೊಂಡಿದ್ದಾರೆ. ಇದು ಇವರು ನಟಿಸಿದ ಎರಡನೇ ಚಿತ್ರವಾಗಿದೆ. ನಿರ್ದೇಶಕ ಸಂದೇಶ್ ಶೆಟ್ಟಿ ಆಜ್ರಿ ಹಾಗೂ ಚಿತ್ರಕಲಾ ಅವರು ಬೆಂಗಳೂರಿನ ಸುದ್ದಿ ಟಿ.ವಿ.ಯಲ್ಲಿ ಒಟ್ಟಿಗೆ ಕೆಲಸ ಮಾಡಿದವರು.

ಹಾಗೆ ಸುಮ್ನೆ ಮಾತಾಡೋಣ ಅಂತ ಏನ್ರಿ ಚಿತ್ರಕ್ಕೆ ಚಿತ್ರರಂಗಕ್ಕೆ ಯಾಕೆ ಬಂದ್ರಿ ಅಂತ ಕೇಳಿದ್ರೆ, ನಾನೆಂದೂ ಚಿತ್ರರಂಗಕ್ಕೆ ಪ್ರವೇಶ ಮಾಡುತ್ತೇನೆ, ಅಭಿನಯಿಸುತ್ತೇನೆ ಎಂದುಕೊಂಡಿರಲಿಲ್ಲ. ಇದೆಲ್ಲದರ ಕ್ರೆಡಿಟ್ ನನ್ನ ಆತ್ಮೀಯರಾದ, ನಿರ್ದೇಶಕ ಸಂದೇಶ್ ಶೆಟ್ಟಿ ಅವರಿಗೆ ಸಲ್ಲಬೇಕು. ನಾನು ನಟನೆ ನೋಡಿದ್ದೀನಿ ಆದ್ರೆ ನಟಿಸಿಲ್ಲ ಅಂತ ಹೇಳಿದರೂ ನನ್ನಲ್ಲಿನ ಪ್ರತಿಭೆ ಗುರುತಿಸಿ ಅವಕಾಶ ನೀಡಿದ ನಿರ್ದೇಶಕ ಸಂದೇಶ ಹಾಗೂ ನಿರ್ಮಾಪಕರಿಗೆ ಧನ್ಯವಾದಗಳು ಅಂದ್ರು.




ಚಿತ್ರಕಲಾ ಅವರ ಫೋಟೋಜನಿಕ್ ಫೇಸ್ ನೋಡಿದ ಸಂದೇಶ್ ಅವರು ಅವರ ಮೊದಲ ನಿರ್ದೇಶನದ ಚಿತ್ರ 'ಕತ್ತಲೆ ಕೋಣೆ'ಯಲ್ಲಿ ಅವಕಾಶ ಕಲ್ಪಿಸಿದ್ದರು. 2018ರಲ್ಲಿ ತೆರೆ ಕಂಡಿದ್ದ ಈ ಚಿತ್ರದಲ್ಲಿ ಗೃಹ ಮಂತ್ರಿಯ ಪಾತ್ರದಲ್ಲಿ ಚಿತ್ರಕಲಾ ಅಭಿನಯಿಸಿದ್ದರು. ಇದೀಗ ಸಂದೇಶ್ ಅವರದ್ದೇ ನಿರ್ದೇಶನದ 'ಇನಾಮ್ದಾರ್' ಚಿತ್ರದಲ್ಲಿ ಪೋಷಕ ನಟಿ ಪಾತ್ರದಲ್ಲಿ ಚಿತ್ರಕಲಾ ನಟಿಸಿದ್ದಾರೆ. ತರಂಗಾಂತರಂಗ ಎಂಬ ಚಿತ್ರದಲ್ಲಿಯೂ ಅಭಿನಯಿಸುತ್ತಿರುವ ಚಿತ್ರಕಲಾ ಅವರು ಸ0ದೇಶ್ ಅವರ 3–4 ಪ್ರಾಜೆಕ್ಟ್‌ಗೂ ಒಪ್ಪಿಗೆ ನೀಡಿದ್ದಾರೆ. ಅಕ್ಟೋಬರ್ 6ರಂದು ಅನಾಮಾರ್ ಚಿತ್ರದ ಟ್ರೇಲರ್ ಹಾಗೂ ಸೆ.15ರಂದು ಬೆಳಗಾವಿಯಲ್ಲಿ ಚಿತ್ರದ ಧ್ವನಿ ಸುರುಳಿ ಬಿಡುಗಡೆಯಾಗಲಿದೆ. ಕನ್ನಡ ಚಿತ್ರರಂಗದ ಹಿರಿಯ ಕಲಾವಿದರಾದ ಅವಿನಾಶ್, ಪ್ರಮೋದ್ ಶೆಟ್ಟಿ, ಶರತ್ ಲೋಹಿತಾಶ್ವ, ಪ್ರಿಲ್ಲರ್ ಮಂಜು, ಎಂ.ಕೆ. ಮಠ ಮಾತ್ರವಲ್ಲದೆ ಅನೇಕ ಯುವ ನಟರು ಈ ಚಿತ್ರದಲ್ಲಿ ಅಭಿನಯಿಸಿದ್ದಾರೆ.

ಏನೇ ಆಗಲಿ ಕನ್ನಡ ಚಿತ್ರರಂಗದಲ್ಲಿ ಹೊಸಬರಿಗೆ ಹೆಚ್ಚು ಆದ್ಯತೆ ನೀಡಿ, ಹೊಸತನದ ಸಿನಿಮಾ ಮಾಡಿದ ಚಿತ್ರರಂಗಕ್ಕೆ ಆಲ್ ದ ಬೆಸ್ಟ್ ಹೇಳೊದು ಕನ್ನಡಿಗರಾದ ನಮ್ಮ ಕರ್ತವ್ಯ ಅಲ್ಲವೆ?

**– ನೂರ್‌ಅಹ್ಮದ್ ಮಕಾನದಾರ್**

# ಬಿಸಿಎ ತೃತೀಯ ಸೆಮಿಸ್ಟರ್ ಪರೀಕ್ಷೆಯಲ್ಲಿ ಸಾಧನೆ



**■ ವಿಜಯಸಾಕ್ಷಿ ಸುದ್ದಿ, ಗದಗ**

ನಗರದ ಮನೋರಮಾ ಮಹಾವಿದ್ಯಾಲಯದ ಶೈಕ್ಷಣಿಕ ಸಾಲಿನ ಬಿಸಿಎ ಕೋರ್ಸಿನ 3ನೇ ಸೆಮಿಸ್ಟರ್ ಪರೀಕ್ಷೆಯಲ್ಲಿ ಸಾಧನೆಗೈದ ಮಹಾವಿದ್ಯಾಲಯದ ವಿದ್ಯಾರ್ಥಿಗಳಾದ ಪೂಜಾ ಮುಳ್ಳಾಳ 647 ಅಂಕ ಪಡೆದು ಪ್ರಥಮ ಸ್ಥಾನ, ತಬಸುಮ ಕವಲೂರ 638 ಅಂಕ ಪಡೆದು ದ್ವಿತೀಯ ಸ್ಥಾನ, ವೈಷ್ಣವಿ ಮುಂಡರಗಿ 619 ಅಂಕ ಪಡೆದು ತೃತೀಯ ಸ್ಥಾನ, ರಚೇಲ 609 ಅಂಕ ಪಡೆದು ನಾಲ್ಕನೇ ಸ್ಥಾನ, ಸಹನಾ ಗಟ್ಟಿ 604 ಅಂಕ ಪಡೆದು ಐದನೇ ಸ್ಥಾನ ಪಡೆದಿದ್ದಾರೆ.

ಮಹಾವಿದ್ಯಾಲಯಕ್ಕೆ ಕೀರ್ತಿ ತಂದ ವಿದ್ಯಾರ್ಥಿಗಳ ಸಾಧನೆಯನ್ನು ಸಂಸ್ಥೆಯ ಚೇರಮನ್ನರಾದ ಎನ್.ಎಮ್ ಕುಡತರಕರ, ಪ್ರಾಚಾರ್ಯ ಬಿ.ಎಸ್ ಹಿರೇಮಠ, ಆಡಳಿತಾಧಿಕಾರಿ ಕಿಶೋರ ಮುದಗಲ್ಲ, ಸಂಸ್ಥೆಯ ನಿರ್ದೇಶಕರಾದ ಮಂಜುನಾಥ ಕುಡತರಕರ, ಸಂಜಯಕುಮಾರ ಕುಡತರಕರ, ಚೇತನ ಕುಡತರಕರ, ಸಹ ಸಂಯೋಜಕರಾದ ಪ್ರೊ. ಸವಿತಾ ಪೂಜಾರ ಹಾಗೂ ಸಿಬ್ಬಂದಿ ವರ್ಗದವರು ಅಭಿನಂದಿಸಿದ್ದಾರೆ.

# ಮನಸೂರೆಗೊಂಡ ಸಾಂಸ್ಕೃತಿಕ ಕಾರ್ಯಕ್ರಮ

**■ ವಿಜಯಸಾಕ್ಷಿ ಸುದ್ದಿ, ಗದಗ**

ನಗರದ ಶ್ರೀ ಗಾನಯೋಗಿ ಪಂಚಾಕ್ಷರಿ ಗವಾಯಿಗಳವರ ಮಾರುಕಟ್ಟೆ ಪ್ರಾಂಗಣ, ಎಪಿಎಂಸಿ ಯಾರ್ಡ್‌ನಲ್ಲಿ ಶ್ರೀ ಗಜಾನನ ಉತ್ಸವ ಸಮಿತಿ ವತಿಯಿಂದ ಗಣೇಶ ಹಬ್ಬದ ನಿಮಿತ್ತ ರವಿವಾರ ರಾತ್ರಿ 7 ಗಂಟೆಗೆ ಗಣಪತಿ ಮಂಟಪದಲ್ಲಿ ಕಲರ್ಸ್ ವಾಹ್ಯ ಕನ್ನಡ ಕೋಗಿಲೆ ಖ್ಯಾತಿಯ ಮಹಾನ್ಯ ಪಾಟೀಲ ಇವರ ಗಾನ ವೈಭವ, ಕಿರುತೆರೆ ಹಾಸ್ಯ ಕಲಾವಿದ ಮಲ್ಲಪ್ಪ ಹೊಂಗಲ್, ಖ್ಯಾತ ನಿರೂಪಕ ಡಾ.ಗುರು ಪಾಟೀಲ, ಕಿರುತೆರೆ ಮಿಮಿಕ್ರಿ ಕಲಾವಿದ ರಾಜ ಕರಣ, ಗಾಯಕಿ



ಸವಿತಾ, ಭಾಗ್ಯ ಹಾಗೂ ಫಕೀರೇಶ ಹೂಗಾರ ಇವರಿಂದ ನಡೆದ ಸಾಂಸ್ಕೃತಿಕ ಕಾರ್ಯಕ್ರಮಗಳು ಜನಮನ ಸೂರೆಗೊಂಡವು.

ಮಹಾನ್ಯ ಜೊತೆ ಜನರು ಸಂಗೀತದೊಂದಿಗೆ ಹೆಜ್ಜೆ ಹಾಕಿದರು. ನೆರೆದ ಜನರಿಂದ ಸಿಳ್ಳೆ, ಚಪ್ಪಾಳೆಯ ಸುರಿಮಳೆ ಸುರಿಸಿ ಕಲಾವಿದರನ್ನು ಪ್ರೋತ್ಸಾಹಿಸಿದರು. ಈ ಸಂಧರ್ಭದಲ್ಲಿ ಗಜಾನನ ಉತ್ಸವ ಸಮಿತಿಯ ಅಧ್ಯಕ್ಷ ತಿಮ್ಮಣ್ಣ ಕೊನರಡ್ಡಿ, ಪದಾಧಿಕಾರಿಗಳು, ಸದಸ್ಯರು ಸಾವಿರಾರು ಕಲಾ ಪ್ರೇಮಿಗಳು ಉಪಸ್ಥಿತರಿದ್ದರು.

# ಸೆ. 30ರಂದು ಉದ್ಯಮಶೀಲತಾ ಪ್ರೇರಣಾ ಕಾರ್ಯಕ್ರಮ

**■ ವಿಜಯಸಾಕ್ಷಿ ಸುದ್ದಿ, ಗದಗ**

ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಹಾಗೂ ಜೀವನೋಪಾಯ ಇಲಾಖೆ, ಕರ್ನಾಟಕ ಸರ್ಕಾರ ಇವರ ಪ್ರಾಯೋಜಕತ್ವದಲ್ಲಿ, ಕರ್ನಾಟಕ ಉದ್ಯಮಶೀಲತಾಭಿವೃದ್ಧಿ ಕೇಂದ್ರ (ಸಿಡಾಕ್), ಧಾರವಾಡ ಇವರು ಸ್ವಂತ ಉದ್ಯೋಗ ಕೈಗೊಳ್ಳಲು ಇಚ್ಛಿಸುವವರಿಗಾಗಿ 1 ದಿನದ ಉದ್ಯಮಶೀಲತಾ ಪ್ರೇರಣಾ ಕಾರ್ಯಕ್ರಮವನ್ನು ಸೆಪ್ಟೆಂಬರ್ 30 ರಂದು ಮಹೇಶ್ವರಿ ವಿವಿದೊದ್ದೇಶಗಳ ಮಹಿಳಾ ಮಂಡಳ, ಗದಗ ಇಲ್ಲಿ ಏರ್ಪಡಿಸಲಾಗಿದೆ.

ಈ ಕಾರ್ಯಕ್ರಮದಲ್ಲಿ ಸ್ವಂತ ಉದ್ಯಮವನ್ನು ಸ್ಥಾಪಿಸುವ ಆಸಕ್ತರಿಗೆ ಪ್ರೇರೇಪಣೆ, ಸ್ವಂತ ಉದ್ಯಮ ಸ್ಥಾಪನೆಗಾಗಿ ಸರ್ಕಾರ ಹಾಗೂ ಹಣಕಾಸು ಸಂಸ್ಥೆಗಳಿಂದ ದೊರೆಯುವ ನೆರವು/ ಪ್ರೋತ್ಸಾಹ, ಮುಂದೆ ಕೈಗೊಳ್ಳಲಾಗುವ ಉದ್ಯಮಶೀಲತಾಭಿವೃದ್ಧಿ ತರಬೇತಿ ಇತ್ಯಾದಿ ವಿಷಯಗಳ ಕುರಿತು ಮಾಹಿತಿಯನ್ನು ನೀಡಲಾಗುವುದು. ಆಸಕ್ತರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿ ಪ್ರಯೋಜನ ಪಡೆಯಬಹುದಾಗಿದೆ.

ಭಾಗವಹಿಸುವವರು ಕನಿಷ್ಠ 18 ವರ್ಷದವರಾಗಿರಬೇಕು ಹಾಗೂ ಓದಲು/ ಬರೆಯಲು ಬರುತ್ತಿರಬೇಕು. ಮಹಿಳೆಯರಿಗೆ, ಪರಿಶಿಷ್ಠ ಜಾತಿ–ಪಂಗಡದವರಿಗೆ, ಹಿಂದುಳಿದವರಿಗೆ ಆದ್ಯತೆ ನೀಡಲಾಗುವುದು.

ಹೆಚ್ಚಿನ ಮಾಹಿತಿಗಾಗಿ ಸಿಡಾಕ್ ಜಿಲ್ಲಾ ಕಚೇರಿ, ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾರಿಗಳ ಕಚೇರಿ, ರೂಮ್. ನಂ. 106, ಜಿಲ್ಲಾಡಳಿತ ಭವನ, ಗದಗ. ದೂರವಾಣಿ ಸಂ. 77958 55847, 87227 59959 ಸಂಪರ್ಕಿಸಬಹುದಾಗಿದೆ.

# ಕೊಡಗಿನಲ್ಲಿ ಬೋಧಕ ಸಿಬ್ಬಂದಿ ಕೊರತೆ: ಪಿಯು ವಿದ್ಯಾರ್ಥಿಗಳ ಭವಿಷ್ಯ ಅತಂತ್ರ

**■ ವಿಜಯಸಾಕ್ಷಿ ಸುದ್ದಿ, ಮಡಿಕೇರಿ**

ಕೊಡಗಿನ ಸರ್ಕಾರಿ ಜೂನಿಯರ್ ಕಾಲೇಜುಗಳಲ್ಲಿ ಖಾಯಂ ಭೋದಕ ಸಿಬ್ಬಂದಿಯ ಕೊರತೆಯಿಂದ ಕಲಿಕೆಯ ಮೇಲೆ ತೀವ್ರ ಪರಿಣಾಮ ಬೀರುತ್ತಿದ್ದು, ವಿದ್ಯಾರ್ಥಿಗಳ ಭವಿಷ್ಯ ಅತಂತ್ರವಾಗಿದೆ.

ಜಿಲ್ಲಾ ಪಿಯು ಮಂಡಳಿಯಲ್ಲಿ ಶೇ.50ಕ್ಕೂ ಅಧಿಕ ಹುದ್ದೆಗಳು ಖಾಲಿ ಇದ್ದು, ಸಿಬ್ಬಂದಿ ಕೊರತೆಯ ನಡುವೆಯೇ ಕಾರ್ಯನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರಿಗೆ ಎರಡು ತಿಂಗಳಿಂದ ವೇತನ ನೀಡಿಲ್ಲ. "ಜಿಲ್ಲೆಯು, ಎಲ್ಲಾ ಸರ್ಕಾರಿ ಮತ್ತು ಅನುದಾನಿತ ಜೂನಿಯರ್ ಕಾಲೇಜುಗಳಲ್ಲಿ ಉಪನ್ಯಾಸಕರ ಕೊರತೆಯನ್ನು ತೀವ್ರವಾಗಿ ಎದುರಿಸುತ್ತಿದೆ. ಇಷ್ಟು ದೊಡ್ಡ ಪ್ರಮಾಣದ ಸಿಬ್ಬಂದಿ ಕೊರತೆಯಿಂದ ಸಂಸ್ಥೆ ನಡೆಸಲು ನಮಗೆ ಸಾಧ್ಯವಾಗುತ್ತಿಲ್ಲ.

# ಸಾಯಿ ಮಹಿಳಾ ಸೊಸೈಟಿಗೆ 2.94 ಲಕ್ಷ ರೂ. ಲಾಭ

**■ ವಿಜಯಸಾಕ್ಷಿ ಸುದ್ದಿ, ಲಕ್ಕುಂಡಿ**

ಷೇರುದಾರರ ಹಾಗೂ ಗ್ರಾಹಕರ ಸಹಕಾರದಿಂದ ಕಳೆದ 15 ವರ್ಷಗಳಿಂದ ಪ್ರಾಮಾಣಿಕವಾಗಿ ಸಂಘವು ವ್ಯವಹಾರವನ್ನು ನಡೆಸಿಕೊಂಡು ಬಂದಿದ್ದು, ವಾರ್ಷಿಕ 2.94 ಲಕ್ಷ ರೂ.ಗಳ ಲಾಭವನ್ನು ಪಡೆದುಕೊಂಡಿದೆ ಎಂದು ಸಾಯಿ ಮಹಿಳಾ ಕೋ–ಆಪ್ ಕ್ರೆಡಿಟ್ ಸೊಸೈಟಿ ನಿರ್ದೇಶಕಿ, ಗ್ರಾಮ ಪಂಚಾಯಿತಿ ಸದಸ್ಯೆ ಲಲಿತಾ ಗದಗಿನ ಹೇಳಿದರು.

ಇಲ್ಲಿಯ ಸಾಯಿ ಮಹಿಳಾ ಕೋ–ಆಪ್ ಕ್ರೆಡಿಟ್ ಸೊಸೈಟಿಯ 15ನೇ ವಾರ್ಷಿಕ ಸರ್ವ ಸಾಧಾರಣ ಸಭೆಯನ್ನು ಉದ್ದೇಶಿಸಿ ಮಾತನಾಡಿದ ಅವರು, ಮಹಿಳೆಯರ ಸಬಲೀಕರಣವಾಗಬೇಕೆಂಬ ಮಹದಾಸೆಯಿಂದ ಈ ಮಹಿಳಾ ಸಹಾರಿ ಸಂಘವನ್ನು ಸ್ಥಾಪಿಸಲಾಗಿದೆ. ಸಾಲಗಾರರು ನಿಗದಿತ ಸಮಯದೊಳಗೆ



ಸಾಲವನ್ನು ಮರುಪಾವತಿಸಿ ಸಂಘದ ಶ್ರೇಯೋಭಿವೃದ್ಧಿಗೆ ಸಹಕರಿಸಬೇಕು ಎಂದು ವಿನಂತಿಸಿಕೊಂಡರು.

ಸಂಘದ ಕಾರ್ಯದರ್ಶಿ ಅಶೋಕ ಗದಗಿನ ಲೆಕ್ಕ ಪತ್ರ ವಿವರಿಸುತ್ತಾ, ಸಂಘದಲ್ಲಿ 718 ಶೇರುದಾರರು ಇದ್ದು, ವಾರ್ಷಿಕ ಎಲ್ಲ ಮೂಲಗಳಿಂದ 1.30 ಕೋಟಿ ರೂ.ಗಳ ವ್ಯವಹಾರವನ್ನು ಮಾಡಲಾಗಿದೆ. ಇದರಲ್ಲಿ 2.94 ಲಕ್ಷ ರೂ.ಗಳ ಲಾಭಾಂಶವನ್ನು ಹೊಂದಿದ್ದು ಹೆಮ್ಮೆ ತಂದಿದೆ ಎಂದರು. ಬಿ.ಬಿ ಹಡಪದ ಸಂಘವು ನಡೆದುಬಂದ ದಾರಿಯ ಕುರಿತು ವಿವರಿಸಿದರು. ಸಂಘದ ಅಧ್ಯಕ್ಷೆ ರೂಪಾ ಕಂಠಿಗೊಣ್ಣವರ ಅಧ್ಯಕ್ಷತೆ ವಹಿಸಿದ್ದರು. ನಿರ್ದೇಶಕರಾದ ಭೀಮವ್ವ ಮುಸ್ಕಿನಭಾವಿ, ಪಾರವ್ವ ಬಣವಿ ಸೇರಿದಂತೆ ನಿರ್ದೇಶಕರು ಇದ್ದರು. ಮಂಜುನಾಥ ಹುಬ್ಬಳ್ಳಿ ನಿರೂಪಿಸಿದರು. ಶ್ರೀಶೈಲ ಕತ್ತಿ ವಂದಿಸಿದರು.

## ಶಿಕ್ಷಕರ ದಿನಾಚರಣೆ ಕಾರ್ಯಕ್ರಮದಲ್ಲಿ ಶಾಸಕ ಜಿ.ಎಸ್ ಪಾಟೀಲ

# ಎಸ್‌ಎಸ್‌ಎಲ್‌ಸಿ ಫಲಿತಾಂಶವನ್ನು ಇನ್ನಷ್ಟು ಎತ್ತರಕ್ಕೇರಿಸಿ



ಇಂದಿನ ದಿನಗಳಲ್ಲಿ ಖಾಸಗಿ ಶಾಲೆಗಳಿಗಿಂತ ಸರಕಾರಿ ಶಾಲೆಗಳಲ್ಲಿಯೇ ಗುಣಮಟ್ಟದ ಶಿಕ್ಷಣ ಸಿಗುತ್ತಿರುವುದು ಸಂತಸದ ವಿಷಯ. ಆದಾಗ್ಯೂ ಗದಗ ಜಿಲ್ಲೆಯ ಎಲ್ಲ ಶಿಕ್ಷಣ ಅಧಿಕಾರಿಗಳು, ಶಿಕ್ಷಕರು ಗದಗ ಜಿಲ್ಲೆಯ ಎಸ್‌ಎಸ್‌ಎಲ್‌ಸಿ ಫಲಿತಾಂಶವನ್ನು ಇನ್ನಷ್ಟು ಎತ್ತರಕ್ಕೆ ಏರಿಸುವತ್ತ ಗಮನ ಹರಿಸಬೇಕು. ಶಾಲಾ ಸಂಕೀರ್ಣವನ್ನು ಹಸಿರಾಗಿರಿಸಿರುವುದಕ್ಕೆ ಶಾಲಾ ಸುಧಾರಣಾ ಸಮಿತಿಯವರನ್ನು, ಶಿಕ್ಷಕರನ್ನು, ವಿದ್ಯಾರ್ಥಿಗಳನ್ನು, ಗ್ರಾಮಸ್ಥರನ್ನು ತಾವು ಹೃತ್ಪೂರ್ವಕವಾಗಿ ಅಭಿನಂದಿಸುವುದಾಗಿ ತಿಳಿಸಿದ ಶಾಸಕ ಪಾಟೀಲರು, ಶಾಲಾ ಆವರಣದಲ್ಲಿ ನಿರ್ಮಿಸಲು ಉದ್ದೇಶಿಸಿರುವ ಸಭಾಭವನಕ್ಕೆ ತಮ್ಮ ಶಾಸಕರ ಅಭಿವೃದ್ಧಿ ಅನುದಾನದ ಅಡಿಯಲ್ಲಿ 5 ಲಕ್ಷ ರೂ.ಗಳನ್ನು ನೀಡುವುದಾಗಿ ಘೋಷಿಸಿದರು.

**■ ವಿಜಯಸಾಕ್ಷಿ ಸುದ್ದಿ, ನರೇಗಲ್ಲ**

ಈ ದೇಶವನ್ನು ಕಟ್ಟುವ, ತಮ್ಮನ್ನು ನಂಬಿ ಬರುವ ವಿದ್ಯಾರ್ಥಿಗಳ ಬದುಕಿಗೆ ಬೆಳಕನ್ನು ನೀಡುವ ಶಿಕ್ಷಕರ ಬಗ್ಗೆ ನನಗೆ ವಿಶೇಷ ಆದರಾಭಿಮಾನಗಳಿವೆ. ಶಿಕ್ಷಕರು ಈ ಜಗತ್ತನ್ನು ಬೆಳಗುವ ನಂದಾ ದೀಪವಾಗಿದ್ದಾರೆ ಎಂದು ರೋಣ ಶಾಸಕ ಜಿ.ಎಸ್ ಪಾಟೀಲ ಹೇಳಿದರು.

ಸಮೀಪದ ಕೋಟುಮಚಗಿಯ ಮಾದರಿ ಕೇಂದ್ರ ಶಾಲೆಯ ಸಭಾಂಗಣದಲ್ಲಿ ರವಿವಾರ ರೋಣದ ಎಸ್.ಆರ್ ಪಾಟೀಲ ಪ್ರತಿಷ್ಠಾನ ಮತ್ತು ಕೋಟುಮಚಗಿಯ ಶಿಕ್ಷಕ ದಿನೋತ್ಸವ ಸಮಿತಿಗಳ ಜಂಟಿ ಆಶ್ರಯದಲ್ಲಿ ನಡೆದ ಅವರು ಮಾತನಾಡಿದರು.

ಡಾ. ಸರ್ವಪಲ್ಲಿ ರಾಧಾಕೃಷ್ಣನ್ ಮತ್ತು ದೇಶದ ಮೊದಲ ಶಿಕ್ಷಕಿ ಸಾವಿತ್ರಿಬಾಯಿ ಫುಲೆ ಅವರು ಎಂದಿಗೂ ಶಿಕ್ಷಕರಿಗೆ ಆದರ್ಶಪ್ರಾಯರಾಗಿದ್ದಾರೆ. ಅವರ ಆದರ್ಶಗಳನ್ನು ನಿಮ್ಮಲ್ಲಿ ಅಳವಡಿಸಿಕೊಂಡು ನೀವು ವಿದ್ಯಾರ್ಥಿಗಳಿಗೆ ಜೀವನದಲ್ಲಿ ಸರಿಯಾಗಿ ಬದುಕುವ ದಾರಿಯನ್ನು ತೋರಬೇಕು. ಶಿಕ್ಷಕರನ್ನು ಗೌರವಿಸುವುದೆಂದರೆ ನಮ್ಮನ್ನು ನಾವು ಗೌರವಿಸಿಕೊಂಡಂತೆ ಎಂದು ಹೇಳಿದರು.

ಸಭೆಯನ್ನುದ್ದೇಶಿಸಿ ಮಾತನಾಡಿದ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಉಪನಿರ್ದೇಶಕ ಎಂ. ಎ. ರಡ್ಡೇರ ಶಾಸಕರು ಶಿಕ್ಷಣ ಪ್ರೇಮಿಗಳಾಗಿದ್ದು ಶೈಕ್ಷಣಿಕ ಚಟುವಟಿಕೆಗಳಿಗೆ ಸಾಕಷ್ಟು ಪ್ರೋತ್ಸಾಹ ನೀಡುತ್ತಾರೆ. ಇದನ್ನು ಸಮರ್ಪಕವಾಗಿ ಬಳಸಿಕೊಂಡು ಅಧಿಕಾರಿಗಳಾದ ನಾವು, ಶಿಕ್ಷಕರಾದ ನೀವುಗಳು ಗದಗ ಜಿಲ್ಲೆಯಲ್ಲಿ ಶೈಕ್ಷಣಿಕ ಕ್ರಾಂತಿಯನ್ನು ಮಾಡಲು ಮುಂದಾಗೋಣ. ಶಾಸಕರು ನಿರೀಕ್ಷಿಸಿರುವಂತೆ ಹತ್ತನೆ ತರಗತಿಯ ಫಲಿತಾಂಶವನ್ನು ಇನ್ನೂ ಉತ್ತಮಪಡಿಸಲು ಎಲ್ಲರೂ ಶ್ರಮಿಸೋಣ ಎಂದರು.

ಸಭೆಯನ್ನುದ್ದೇಶಿಸಿ ನಿವೃತ್ತ ಮುಖ್ಯ ಶಿಕ್ಷಕ ಅರುಣ ಬಿ.ಕುಲಕರ್ಣಿ ಮಾತನಾಡಿ, ಶಿಕ್ಷಕರು ವಿದ್ಯಾರ್ಥಿಗಳಲ್ಲಿ ಮಾನವೀಯ ಮೌಲ್ಯಗಳನ್ನು ಬೆಳೆಸಲು ಮುಂದಾಗಬೇಕು. ಸಂಸ್ಕೃತಿ, ಸಂಸ್ಕಾರಗಳನ್ನು ಚಿಕ್ಕಂದಿನಲ್ಲಿಯೇ ಅವರಲ್ಲಿ ಬೆಳೆಸಿದರೆ ಅವರು ಉತ್ತಮ ನಾಗರಿಕರಾಗುತ್ತಾರೆ ಎಂದರು. ಡಾ. ವೆಂಕಟೇಶ ನಾಗಮ್ಮನವರ ದೇಶದ ಮೊದಲ ಮಹಿಳಾ ಶಿಕ್ಷಕಿ ಸಾವಿತ್ರಿಬಾಯಿ ಫುಲೆ ಮತ್ತು ಡಾ. ಎಸ್.ರಾಧಾಕೃಷ್ಣನ್‌ರವರನ್ನು ಕುರಿತು ವಿಶೇಷ ಉಪನ್ಯಾಸ ನೀಡಿದರು.

ವೇದಿಕೆಯ ಮೇಲೆ ಗ್ರಾ.ಪಂ ಅಧ್ಯಕ್ಷೆ ತನುಜಾ ಹಾದಿಮನಿ, ಉಪಾಧ್ಯಕ್ಷ ಸಂತೋಷ ಮುತ್ತಾಳ, ಸದಸ್ಯರು, ಎಸ್‌ಡಿಎಂಸಿ ಅಧ್ಯಕ್ಷರು, ಸದಸ್ಯರು, ತಾ.ಪಂ ಮಾಜಿ ಅಧ್ಯಕ್ಷ ಕೃಷ್ಣಗೌಡ ಪಾಟೀಲ, ಧುರೀಣರಾದ ವಿ.ಬಿ ಸೋಮನಕಟ್ಟಿ, ಯೂಸೂಫ್ ಇಟಗಿ, ಶಿವಪುತ್ರಪ್ಪ ಇಟಗಿ, ಗ್ರಾ.ಪಂ ಮಾಜಿ ಅಧ್ಯಕ್ಷ ಶರಣಪ್ಪ ಮ್ಯಾಗೇರಿ, ಕಾಶಪ್ಪ ನೀರಲಗಿ, ಯಲ್ಲಪ್ಪ ಗುರಿಕಾರ, ಸುರೇಶ ಶಿರೋಳ ಮುಂತಾದವರಿದ್ದರು.

ಶಿಕ್ಷಕ ಡಿ.ಬಿ ತಳವಾರ ಮತ್ತು ಆರ್.ಎಂ ಲಕ್ಕುಂಡಿಯವರನ್ನು ಸನ್ಮಾನಿಸಲಾಯಿತು. ಹಲ್ಗಾಪೂರ, ತಿಮ್ಮಾಪೂರ, ಕಣಗಿನಹಾಳ, ನಾರಾಯಣಪೂರ ಮತ್ತು ಕೋಟುಮಚಗಿ ಗ್ರಾಮಗಳ ಎಲ್ಲ ಸರಕಾರಿ, ಅನುದಾನಿತ, ಅನುದಾನ ರಹಿತ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಒಟ್ಟು 180 ಶಿಕ್ಷಕರನ್ನು ಸನ್ಮಾನಿಸುವ ಮೂಲಕ ಶಿಕ್ಷಕರ ದಿನಾಚರಣೆಯನ್ನು ವಿಶಿಷ್ಠವಾಗಿ ಆಚರಿಸಲಾಯಿತು.

ತಾ.ಪಂ ಮಾಜಿ ಅಧ್ಯಕ್ಷ ವಿದ್ಯಾಧರ ದೊಡ್ಡಮನಿ ಸ್ವಾಗತಿಸಿದರು. ಪ್ರಕಾಶ ಗಾಣಿಗೇರ ನಿರೂಪಿಸಿದರು.

ಕೋಟುಮಚಗಿ ಸಿಆರ್‌ಪಿ ಕಳಕಣ್ಣವರ ಸನ್ಮಾನ ಸಮಾರಂಭದ ನಿರೂಪಣೆ ಮಾಡಿದರು. ಶರಣಪ್ಪ ಜಗ್ಗಲ ಮತ್ತು ಸಂಗಡಿಗರ ಸಂಗೀತ ಜನಮನ ಸೆಳೆಯಿತು. ಧುರೀಣ ಪ್ರಕಾಶ ಕುಲಕರ್ಣಿ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಮಲ್ಲಿಕಾರ್ಜುನ ಅಣ್ಣಿಗೇರಿ ವಂದಿಸಿದರು.

# ಶಿಕ್ಷಕರ ಬೀಳ್ಕೊಡುಗೆ, ಸ್ವಾಗತ ಸಮಾರಂಭ

**■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ**

ಸಮೀಪದ ಶಿಗ್ಲಿ ಗ್ರಾಮದ ಸರಕಾರಿ ಮಾದರಿ ಪ್ರಾಥಮಿಕ ಶಾಲೆಯಲ್ಲಿ ಶಿಕ್ಷಕರ ಬೀಳ್ಕೊಡುಗೆ ಹಾಗೂ ಸ್ವಾಗತ ಸಮಾರಂಭ ಮತ್ತು ಸಾಧಕ ವಿದ್ಯಾರ್ಥಿಗೆ ಸನ್ಮಾನ ಸಮಾರಂಭವು ಶನಿವಾರ ನೆರವೇರಿತು.

ಶಾಲೆಯಿಂದ ವರ್ಗಾವಣೆಗೊಂಡ ದೈಹಿಕ ಶಿಕ್ಷಕ ಮಂಜುನಾಥ ಚಾಕಲಬ್ಬಿ ಇವರನ್ನು ಸನ್ಮಾನಿಸಲಾಯಿತು. ನೂತನವಾಗಿ ಶಾಲೆಗೆ ಹಾಜರಾದ ಶಿಕ್ಷಕ ತಿಪ್ಪಾ ನಾಯಕ ಅವರನ್ನು ಸ್ವಾಗತಿಸಲಾಯಿತು. ಈ ಸಂದರ್ಭದಲ್ಲಿ ತಾಲೂಕಾ ಕಸಾಪ ಅಧ್ಯಕ್ಷ ಹಾಗೂ ಬಿಆರ್‌ಪಿ ಈಶ್ವರ ಮೆಡ್ಲೇರಿ ಮಾತನಾಡಿ, ಶಿಕ್ಷಕರು ಮಕ್ಕಳ ಸರ್ವತೋಮುಖ ಬೆಳವಣಿಗೆಯಲ್ಲಿ ಪೂರಕವಾಗಿ ಕರ್ತವ್ಯ ನಿರ್ವಹಿಸಬೇಕು. ಇದ್ದ ಸಮಯದಲ್ಲಿ ವಿದ್ಯಾರ್ಥಿಗಳೊಂದಿಗೆ ಉತ್ತಮ ಬಾಂಧವ್ಯ ಹೊಂದಿ, ಅವರ



ಶೈಕ್ಷಣಿಕ ಪ್ರಗತಿಗೆ ಶ್ರಮಿಸಬೇಕು. ಶಿಕ್ಷಕರ ಬಗ್ಗೆ ಸಮಾಜದಲ್ಲಿ ಉತ್ತಮ ಗೌರವವಿದ್ದು, ಅದಕ್ಕೆ ತಕ್ಕಂತೆ ನಮ್ಮ ಹುದ್ದೆಯಲ್ಲಿ ಪ್ರಾಮಾಣಿಕವಾಗಿ ಕಾರ್ಯವನಿರ್ವಹಿಸಬೇಕು. ಈ ನಿಟ್ಟಿನಲ್ಲಿ ಶಿಕ್ಷಕ ಮಂಜುನಾಥ ಚಾಕಲಬ್ಬಿ ಅವರು ಉತ್ತಮವಾಗಿ ಕಾರ್ಯ ನಿರ್ವಹಿಸಿದ್ದಾರೆ ಎಂದರು.

ಎಸ್‌ಡಿಎಂಸಿ ಅಧ್ಯಕ್ಷ ಶಂಭುಲಿಂಗ ಕಟ್ಟಿಮನಿ ಮಾತನಾಡಿ, ಶಾಲೆಯ ವಾತಾವರಣ ಸುಂದರವಾಗಿದ್ದು, ಮೂಲಭೂತ ಸೌಕರ್ಯದಿಂದ ಕೂಡಿದೆ. ಸರಕಾರಿ ಶಾಲೆಗೆ ಮಕ್ಕಳನ್ನು ಸೇರಿಸುವ ಕೆಲಸವಾಗಬೇಕು ಎಂದರು. ಕ್ರೀಡಾಕೂಟದಲ್ಲಿ ವಯಕ್ತಿಯ ವೀರಾಗ್ರಣಿ ಪ್ರಶಸ್ತಿ ಗಳಿಸಿದ ಅಮಿತಕುಮಾರ ಸರದಾರರನ್ನು ಸನ್ಮಾನಿಸಲಾಯಿತು. ಜಿ.ಬಿ ರಾಮಗೇರಿ, ಪರಶುರಾಮ ಕೊರವರ, ಎನ್.ಎಂ ಬರಮಗೌಡ್ರು, ಎಸ್.ಬಿ ಅಣ್ಣಿಗೇರಿ, ಈರಣ್ಣ ಅಳ್ಳಳ್ಳಿ, ಮಂಜುನಾಥ ಸಂಭೋಜಿ, ಎನ್.ಬಿ ಪಶುಪತಿಹಾಳ, ಆರ್.ಡಿ ಕಲಾಯಗಾರ ಉಪಸ್ಥಿತರಿದ್ದರು. ಆರ್.ಎಫ್ ಕಪ್ಪತ್ತನವರ ಹಾಗೂ ದೀಪಾ ಭಸ್ಮೆ ನಿರ್ವಹಿಸಿದರು.

### ಜನಸ್ಪಂದನ ಯಶಸ್ವಿಗೊಳಿಸಲು ಆದ್ಯತೆ– ಸಚಿವ ಸಂತೋಷ ಲಾಡ್

# ಜನರ ಸಮಸ್ಯೆ ನಿವಾರಣೆಗೆ ಅಗತ್ಯ ಕ್ರಮ






**■ವಿಜಯಸಾಕ್ಷಿ ಸುದ್ದಿ, ಧಾರವಾಡ**

ಜನರ ಆಶೋತ್ತರಗಳಿಗೆ ತ್ವರಿತವಾಗಿ ಸ್ಪಂದಿಸುತ್ತಿರುವ ರಾಜ್ಯ ಸರಕಾರದ ಮತ್ತೊಂದು ಜನಪರ ಕಾರ್ಯಕ್ರಮ ಜನತಾದರ್ಶನವಾಗಿದೆ. ಜನತಾದರ್ಶನದಲ್ಲಿ ಸಲ್ಲಿಕೆ ಆಗುವ ಪ್ರತಿ ಅರ್ಜಿಯನ್ನು ಸ್ಥಳದಲ್ಲಿ ಪರಿಶೀಲಿಸಿ, ಪರಿಹಾರಕ್ಕೆ ಅಗತ್ಯ ಕ್ರಮ ಜರುಗಿಸಲಾಗುವುದು. ಪ್ರತಿ ಅಹವಾಲುಗಳ ವಿವರವು ರಾಜ್ಯಮಟ್ಟದಲ್ಲಿಯೂ ಪೋರ್ಟಲ್‌ದಲ್ಲಿ ನೋಂದಣಿ ಆಗುತ್ತದೆ ಎಂದು ಕಾರ್ಮಿಕ ಇಲಾಖೆ ಹಾಗೂ ಧಾರವಾಡ ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ ಲಾಡ್ ಅವರು ಹೇಳಿದರು.

ಅವರು ಸೋಮವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ ಸಹಯೋಗದಲ್ಲಿ ಕೆಸಿಡಿ ಆವರಣದ ಡಾ.ಅಣ್ಣಾಜೀರಾವ್ ಶಿರೂರ ಸೃಜನಾ ರಂಗಮಂದಿರದಲ್ಲಿ ಆಯೋಜಿಸಿದ್ದ ಜಿಲ್ಲಾ ಮಟ್ಟದ ಜನತಾದರ್ಶನ ಕಾರ್ಯಕ್ರಮಕ್ಕೆ ಚಾಲನೆ ನೀಡಿ, ಮಾತನಾಡಿದರು.

ಜನರ ಸಮಸ್ಯೆಗಳನ್ನು ಆಯಾ ಇಲಾಖೆ, ಜಿಲ್ಲೆ, ಅಧಿಕಾರಿಗಳ ಹಂತದಲ್ಲಿ ಆಲಿಸಿ, ನಿಯಮಾನುಸಾರ ಪರಿಹರಿಸಲು ಅಧಿಕಾರಿಗಳು ಕ್ರಮವಹಿಸಬೇಕು. ಜಿಲ್ಲೆಯ ಹಿರಿಯ ಶಾಸಕರಾದ ಎನ್.ಎಚ್. ಕೋನರಡ್ಡಿ , ಅಬ್ಬಯ್ಯ ಪ್ರಸಾದ ಅವರು ಜನರ ಸಮಸ್ಯೆಗಳನ್ನು, ಕುಂದುಕೊರತೆಗಳನ್ನು ಪರಿಹರಿಸಲು ಪ್ರತಿ ವಾರ ಸಾರ್ವಜನಿಕರ ಭೇಟಿ ಕಾರ್ಯಕ್ರಮ ಮಾಡುತ್ತಿದ್ದಾರೆ. ಇದು ಮಾದರಿ ಕ್ರಮ ಎಂದರು.

ತಾವು ಮಂತ್ರಿಗಳಾಗಿ, ಜಿಲ್ಲಾ ಉಸ್ತುವಾರಿ ಸಚಿವರಾದ ತಕ್ಷಣ ಜಿಲ್ಲೆಯಲ್ಲಿ ಸಂಚರಿಸಿ, ಜನರ ಸಮಸ್ಯೆಗಳಿಗೆ ಧ್ವನಿ ಆಗಲು ಪ್ರಯತ್ನಿಸಿದ್ದೇನೆ. ಧಾರವಾಡ ಜಿಲ್ಲೆಯಲ್ಲಿಯೇ ಹೆಚ್ಚು ಸಮಯ ಇದ್ದು, ನಿತ್ಯ ಸಾವಿರಾರು ಜನರ ಅಹವಾಲುಗಳನ್ನು ಆಲಿಸಿ, ಪರಿಹಾರಕ್ಕೆ ಸಂಭಂದಿಸಿದ ಅಧಿಕಾರಿಗಳಿಗೆ ಸಲಹೆ, ಸೂಚನೆ ನೀಡುತ್ತಿದ್ದೇನೆ ಎಂದು ಸಚಿವರು ತಿಳಿಸಿದರು.

ಪ್ರತಿ ಜಿಲ್ಲಾಧಿಕಾರಿ ತಮ್ಮ ಜಿಲ್ಲಾ ವ್ಯಾಪ್ತಿಯಲ್ಲಿ ನಿರಂತರವಾಗಿ ತಾಲೂಕು ಮಟ್ಟದಲ್ಲಿ ಜನತಾದರ್ಶನ ಜರುಗಿಸಿ, ಜನರ ಅಹವಾಲು ಆಲಿಸಬೇಕೆಂದು ಮುಖ್ಯಮಂತ್ರಿಗಳು ಈಗಾಗಲೇ ನಿರ್ದೇಶನ ನೀಡಿದ್ದಾರೆ.

ಮುಂದಿನ ದಿನಗಳಲ್ಲಿ ಜಿಲ್ಲೆಯ ಇತರ ಸ್ಥಳಗಳಲ್ಲೂ ಜನತಾದರ್ಶನ ನಡೆಸಲು ಕ್ರಮವಹಿಸಲಾಗುವುದು ಎಂದು ಸಚಿವರು ತಿಳಿಸಿದರು.

ಶಾಸಕ ಎನ್.ಎಚ್.ಕೋನರಡ್ಡಿ ಮಾತನಾಡಿ, ಜನಪ್ರತಿನಿಧಿಗಳು ತಮ್ಮ ಕ್ಷೇತ್ರದ ಜನರ ಸಮಸ್ಯೆಗಳಿಗೆ ತಕ್ಷಣ ಸ್ಪಂದಿಸಬೇಕು. ತಾವು ಈಗಾಗಲೇ ಕ್ಷೇತ್ರದಲ್ಲಿ ಪ್ರತಿ ವಾರ ಜನರ ಸಮಸ್ಯೆಗಳನ್ನು ಆಲಿಸಲು ನವಲಗುಂದ ಮತ್ತು ಹುಬ್ಬಳ್ಳಿ, ಅಣ್ಣಿಗೇರಿ ಪಟ್ಟಣಗಳಲ್ಲಿ ಮಾಡಲಾಗಿದೆ ಎಂದು ಅವರು ಹೇಳಿದರು.

ಜನತಾದರ್ಶನವು ರಾಜ್ಯ ಸರಕಾರದ ಜನಮುಖಿ ಕಾರ್ಯಕ್ರಮವಾಗಿದ್ದು, ಸಾರ್ವಜನಿಕರು ಸದುಪಯೋಗ ಮಾಡಿಕೊಳ್ಳಬೇಕು ಎಂದು ಶಾಸಕರು ತಿಳಿಸಿದರು.

ಶಾಸಕ ಪ್ರಸಾದ ಅಬ್ಬಯ್ಯ ಮಾತನಾಡಿ, ಜನತಾದರ್ಶನದ ಸದುಪಯೋಗವಾಗಬೇಕು. ತೀರಾ ವೈಯಕ್ತಿಕ ಹಾಗೂ ಅಧಿಕಾರಿ, ಸಿಬ್ಬಂದಿಗಳನ್ನು ಒತ್ತಡಕ್ಕೆ, ಹೆದರಿಕೆಗೆ ಒಳಪಡಿಸುವ ತಂತ್ರಗಾರಿಕೆ ಮಾಡಬಾರದು. ಜನತಾದರ್ಶನ ಬರೀ ಅಹವಾಲು ಸಲ್ಲಿಕೆಗೆ ಮಾತ್ರ ಮೀಸಲಾಗದೇ ಜಿಲ್ಲೆಯ, ಮಹಾನಗರದ ಅಭಿವೃದ್ಧಿಗೆ ಪೂರಕ ಸಲಹೆ, ಮಾರ್ಗದರ್ಶನ ನೀಡಬೇಕು. ನಿಜವಾದ ಬಡವರ, ಅನ್ಯಾಯವಾದವರ ಅಳಲು ಆಲಿಸಿ, ಪರಿಹರಿಸಲು ಕ್ರಮವಹಿಸಬೇಕು ಎಂದು ಅವರು ಹೇಳಿದರು.

ಜಿಲ್ಲಾಧಿಕಾರಿ ಗುರುದತ್ತ ಹೆಗಡೆ ಪ್ರಾಸ್ತಾವಿಕವಾಗಿ ಮಾತನಾಡಿ, ಸರಕಾರದ ಆದೇಶದಂತೆ ಜಿಲ್ಲಾಮಟ್ಟದಲ್ಲಿ ಜನರ ಅಹವಾಲುಗಳನ್ನು ಸ್ವೀಕರಿಸಿ, ಅಗತ್ಯ ತುರ್ತು ಪರಿಹಾರ ಕ್ರಮ ಕೈಗೊಳ್ಳಲು ಅನುವಾಗುವಂತೆ ಜನತಾದರ್ಶನ ಕಾರ್ಯಕ್ರಮ ಆಯೋಜಿಸಲಾಗಿದೆ.

ನಿನ್ನೆಯವರೆಗೆ ಜಿಲ್ಲೆಯ ವಿವಿಧ ತಾಲೂಕುಗಳಿಂದ ಸುಮಾರು 136 ಕ್ಕೂ ಹೆಚ್ಚು ಹಾಗೂ ಇವತ್ತು ಸಹ ಹಲವಾರು ಅಹವಾಲುಗಳು ಸಲ್ಲಿಕೆ ಆಗಿವೆ.

ಕ್ರಿಯಾಶೀಲರಾದ ನಮ್ಮ ಜಿಲ್ಲಾ ಉಸ್ತುವಾರಿ ಸಚಿವರು ಸದಾ ಜನಸಾಮಾನ್ಯರ ಮಧ್ಯದಲ್ಲಿ ಇರುವದರಿಂದ ಮತ್ತು ಸದಾ ಕಾಲ ಜಿಲ್ಲೆಯ ನಗರ, ಗ್ರಾಮಗಳಿಗೆ ಭೇಟಿ ನೀಡುತ್ತಿರುವದರಿಂದ ಜನರ ಸಮಸ್ಯೆಗಳನ್ನು ಸ್ಥಳದಲ್ಲಿ ಆಲಿಸಿ, ಪರಿಹಾರಕ್ಕೆ ಸೂಚಿಸುತ್ತಾರೆ.

ಇದರಿಂದಾಗಿ ಇಂದಿನ ಜನತಾ ದರ್ಶನಕ್ಕೆ ಪ್ರಮುಖ ಮತ್ತು ಕಾನೂನು, ಇತರೆ ಕಾರಣಗಳಿಂದ ಪರಿಹಾರವಾಗದೆ ಇರುವ ಸಮಸ್ಯೆಗಳು, ಜನತಾ ದರ್ಶನಕ್ಕೆ ಬಂದಿವೆ ಎಂದು ಅವರು ತಿಳಿಸಿದರು.

ಅಪರ ಜಿಲ್ಲಾಧಿಕಾರಿ ಗೀತಾ ಸಿ.ಡಿ., ಅವರು ಸ್ವಾಗತಿಸಿದರು.

ವೇದಿಕೆಯಲ್ಲಿ ಕೃಷಿ ಇಲಾಖೆಯ ಕಾರ್ಯದರ್ಶಿ ಹಾಗೂ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಅನ್ಬುಕುಮಾರ, ಮಹಾನಗರ ಪೊಲೀಸ್ ಆಯುಕ್ತರಾದ ರೇಣುಕಾ ಸುಕುಮಾರ, ಜಿಲ್ಲಾ ಪಂಚಾಯತ ಸಿಇಓ ಸ್ವರೂಪ ಟಿ.ಕೆ. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಗೋಪಾಲ ಬ್ಯಾಕೋಡ, ಉಪ ಅರಣ್ಯ ಸಂರಕ್ಷಣಾಧಿಕಾರಿ ಸೋನಲ್ ವೃಷ್ಣಿ, ಮಹಾನಗರ ಆಯುಕ್ತ ಡಾ.ಈಶ್ವರ ಉಳ್ಳಾಗಡ್ಡಿ, ಹುಬ್ಬಳ್ಳಿ ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರದ ಆಯುಕ್ತ ಡಾ.ಸಂತೋಷಕುಮಾರ ಬಿರಾದಾರ, ಉಪವಿಭಾಗಾಧಿಕಾರಿ ಶಾಲಂ ಹುಸೇನ್ ಸೇರಿದಂತೆ ವಿವಿಧ ಇಲಾಖೆಗಳ ಜಿಲ್ಲಾಮಟ್ಟದ ಅಧಿಕಾರಿಗಳು, ತಹಸೀಲ್ದಾರರು, ತಾಲೂಕು ಅಧಿಕಾರಿಗಳು ಇದ್ದರು.

ಜಿಲ್ಲೆಯ ವಿವಿಧೆಡೆಯಿಂದ ತಮ್ಮ ಅಹವಾಲುಗಳನ್ನು ಹೊತ್ತು ಸಾವಿರಾರು ಜನ ಜನತಾದರ್ಶನಕ್ಕೆ ಬಂದು, ಅಹವಾಲು ಸಲ್ಲಿಸಿದರು.

### ಫಲಾನುಭವಿಗಳಿಗೆ ಸೌಲಭ್ಯ

ವೇದಿಕೆಯಲ್ಲಿ ಸಚಿವರು, ಕಂದಾಯ ಇಲಾಖೆಯ ವಿವಿಧ ಸಾಮಾಜಿಕ ಯೋಜನೆಗಳಾದ ಪಿಂಚಣಿ, ಸೌಲಭ್ಯಗಳನ್ನು ಮತ್ತು ಕಾರ್ಮಿಕ ಇಲಾಖೆಯಿಂದ ಕಟ್ಟಡ ಕಾರ್ಮಿಕರ ಅರ್ಹ ಮಕ್ಕಳಿಗೆ ಉಚಿತ ಲ್ಯಾಪ್ ಟಾಪ್, ವಿವಿಧ ಯೋಜನೆಗಳ ಸಹಾಯಧನದ ಚೆಕ್ ಗಳನ್ನು ಸಾಂಕೇತಿಕವಾಗಿ ಫಲಾನುಭವಿಗಳಿಗೆ ವಿತರಿಸಿದರು.

# ಇಂದು ಶಿಕ್ಷಣ ಅದಾಲತ್

**■ವಿಜಯಸಾಕ್ಷಿ ಸುದ್ದಿ, ನರಗುಂದ**

ನರಗುಂದ ತಾಲೂಕು ಹಂತದಲ್ಲಿ ಶಿಕ್ಷಕರ ಕುಂದುಕೊರತೆಗಳನ್ನು ನಿವಾರಿಸುವ ಪ್ರಯುಕ್ತ ಸೆಪ್ಟೆಂಬರ್ 26 ರಂದು ಬೆ 10 ರಿಂದ ಮ. 2 ಗಂಟೆಯವರೆಗೆ ನರಗುಂದ ಬಿ.ಇ.ಓ ಕಚೇರಿಯಲ್ಲಿ ಶಿಕ್ಷಣ ಅದಾಲತ್ ನಡೆಸಲಾಗುವುದು. ಈ ಕುರಿತು ಇಲಾಖೆಗೆ ಸಂಬಂಧಿಸಿದ ವಿಷಯಗಳನ್ನು ಇತ್ಯರ್ಥಪಡಿಸಲು ಶಿಕ್ಷಣ ಅದಾಲತ್ ಹಮ್ಮಿಕೊಳ್ಳಲಾಗಿದೆ. ಶಿಕ್ಷಕರು ಮತ್ತು ಸಾರ್ವಜನಿಕರು ಇದರ ಸದುಪಯೋಗ ಪಡೆದುಕೊಳ್ಳಬೇಕೆಂದು ನರಗುಂದ ಕ್ಷೇತ್ರ ಶಿಕ್ಷಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಗದಗ ನಗರದ ಶ್ರೀ ಗಾನಯೋಗಿ ಪಂಚಾಕ್ಷರಿ ಗವಾಯಿಗಳವರ ಮಾರುಕಟ್ಟೆ ಪ್ರಾಂಗಣ, ಎಪಿಎಂಸಿ ಯಾರ್ಡ್ ನಲ್ಲಿ ಗಣೇಶ ಹಬ್ಬದ ನಿಮಿತ್ತ ಶ್ರೀ ಗಜಾನನ ಉತ್ಸವ ಸಮಿತಿ ಹಾಗೂ ಐಎಂಎ ರಕ್ತ ಭಂಡಾರದ ಸಹಯೋಗದೊಂದಿಗೆ ಸೋಮವಾರ ರಕ್ತದಾನ ಶಿಬಿರ ಆಯೋಜಿಸಲಾಗಿತ್ತು. ಗಜಾನನ ಉತ್ಸವ ಸಮಿತಿ ಅಧ್ಯಕ್ಷರು, ಪದಾಧಿಕಾರಿಗಳು, ಸರ್ವ ಸದಸ್ಯರು, ಗಣ್ಯ ವ್ಯಾಪಾರಸ್ಥರು ಉಪಸ್ಥಿತರಿದ್ದರು. 50ಕ್ಕೂ ಹೆಚ್ಚು ಯುವಕರು ರಕ್ತದಾನ ಮಾಡಿದರು.

# ಮುಂಡರಗಿ ತಾಲೂಕನ್ನು ಬರಪೀಡಿತ ಪ್ರದೇಶವೆಂದು ಘೋಷಿಸಿ



**■ವಿಜಯಸಾಕ್ಷಿ ಸುದ್ದಿ, ಗದಗ**

ಮುಂಡರಗಿ ತಾಲೂಕು ಸತತವಾಗಿ ಬರಕ್ಕೆ ತುತ್ತಾಗಿದೆ. ಮುಂಡರಗಿ ತಾಲೂಕಿನ ರೈತರು ಸಂಕಷ್ಟದಲ್ಲಿ ಇರುವಾಗಲೂ ಸರ್ಕಾರ ತಾಲೂಕನ್ನು ಬರಪೀಡಿತ ಪ್ರದೇಶವೆಂದು ಘೋಷಣೆ ಮಾಡದೆ ಇರುವುದು ರೈತರ ಗಾಯದ ಮೇಲೆ ಬರೆ ಎಳೆದಂತಾಗಿದೆ. ಸರ್ಕಾರ ಕೂಡಲೇ ಮುಂಡರಗಿ ತಾಲೂಕನ್ನು ಬರ ಪೀಡಿತ ಪ್ರದೇಶವೆಂದು ಘೋಷಣೆ ಮಾಡಬೇಕೆಂದು ಬಹುಜನ ಸಮಾಜ ಪಕ್ಷದ ಗದಗ ಜಿಲ್ಲಾಧ್ಯಕ್ಷ ಡಿ.ಎಸ್ ಕಟ್ಟಿಮನಿಯವರ ನೇತೃತ್ವದಲ್ಲಿ ಬೆಂಗಳೂರಿನ ವಿಧಾನಸೌಧ ಎದುರಿಗೆ ಪ್ರತಿಭಟನೆ ನಡೆಸಿ, ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಡಿ.ಎಸ್ ಕಟ್ಟಿಮನಿ, ರಾಜ್ಯ ಸರಕಾರದ ಬರ ಸಂಬಂಧಿತ ವರದಿ ಅವೈಜ್ಞಾನಿಕವಾಗಿದೆ. ಕೂಡಲೇ ಸೂಕ್ತ ರೀತಿಯಲ್ಲಿ ಸಮೀಕ್ಷೆ ನಡೆಸಿ, ಬರಪೀಡಿತ ತಾಲೂಕುಗಳ ಪಟ್ಟಿಯನ್ನು ಪರಿಷ್ಕರಿಸಿ, ರೈತರ ಹಿತವನ್ನು ಕಾಪಾಡಬೇಕೆಂದು ಆಗ್ರಹಿಸಿದರು.

ಮುಖ್ಯಮಂತ್ರಿಗಳ ಅಧೀನ ಕಾರ್ಯದರ್ಶಿಗಳು ಮನವಿ ಸ್ವೀಕರಿಸಿದರು. ಈ ಸಂದರ್ಭದಲ್ಲಿ ಬಿಎಸ್‌ಪಿ ಪ್ರಧಾನ ಸಂಚಾಲಕ ಬಸವರಾಜ ನವಲಗುಂದ, ಜಿ.ಕೆ ತಳಗೇರಿ, ಹನುಮಂತ ಮಾದರ, ಬಸಪ್ಪ ವಡ್ಡರ, ಮಂಜುನಾಥ್ ಹುಬ್ಬಳ್ಳಿ, ರಮೇಶ್ ರಾಮೆನಹಳ್ಳಿ, ವಿಜಯಕುಮಾರ್ ಡಂಬಳ, ಕುಮಾರ ಗೌಡಣ್ಣವರ, ಗುರುಪಾದ ದೊಡ್ಡಮನಿ, ವಿನಾಯಕ ಕುದುರಿ, ನಾಗರಾಜ ಹರಿಜನ, ಅರುಣ್ ದೊಡ್ಡಮನಿ, ಸುಭಾಶ್ ಕುಂಬಾರ ಉಪಸ್ಥಿತರಿದ್ದರು.

# ಸಂಪೂರ್ಣ ಪಟ್ಟಣ ಬಂದ್

▶▶ಮೊದಲನೇ ಪುಟದಿಂದ

ಎಂದು ಸಚಿವರು ಭರವಸೆ ನೀಡಿದ್ದಾರೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಶಾಸಕ ಚಂದ್ರು ಲಮಾಣಿ, ಎಡಿಸಿ ಅನ್ನಪೂರ್ಣ, ತಹಸೀಲ್ದಾರ ಧನಂಜಯ್ ಎಂ, ತಹಸೀಲ್ದಾರರ ಕಾರ್ಯಾಲಯದಲ್ಲಿ ಚರ್ಚಿಸಿ, 2 ದಿನಗಳಲ್ಲಿ ಗದಗ ಜಿಲ್ಲಾಧಿಕಾರಿ ಕಾರ್ಯಾಲಯದಲ್ಲಿ ಸಭೆ ಕರೆದು, ಮುಂದಿನ 8 ದಿನಗಳೊಳಗೆ ಅಂತಿಮವಾಗಿ ವರದಿ ಸಿದ್ಧಪಡಿಸಿ, ಸರ್ಕಾರಕ್ಕೆ ಮನವಿ ಸಲ್ಲಿಸಲಾಗುವುದು ಎಂದರು. ನಂತರ ಪ್ರತಿಭಟನಾಕಾರರು ಪ್ರತಿಭಟನೆಯನ್ನು ಹಿಂಪಡೆದರು.


ಮುಖಂಡರಾದ ಈರಣ್ಣಗೌಡ ಪಾಟೀಲ, ವಿಠಲಾ ಗಣಾಚಾರಿ, ಹೇಮಗಿರೀಶ ಅಡಿವೆಪ್ಪ ಛಲವಾದಿ, ಧೃವಕುಮಾರ ಹೂಗಾರ, ಈರಣ್ಣ ನಾಡಗೌಡ್ರ, ವಿಶ್ವಾನಾಥ ತಾಂಬ್ರಗುಂಡಿ, ಈರಣ್ಣ ಗಡ್ಡಿ, ನಾಗೇಶ ಹುಬ್ಬಳಿ, ಮಂಜುನಾಥ ಇಟಗಿ, ಮಂಜುನಾಥ, ಪವನ್ ಮೇಟಿ, ರಾಜಾಭಕ್ಷಿ ಬೆಟಗೇರಿ, ಕವಿತಾ ಉಳ್ಳಾಗಡ್ಡಿ, ಜ್ಯೋತಿ ಹಾನಗಲ್, ಅಶ್ವಿನಿ ಮುಧೋಳ, ನಾಗರಾಜ ಹಾನಗಲ್, ದೇವು ಹಡಪದ, ರಾಜು ಅಸೂಟಿ ಮುಂತಾದವರಿದ್ದರು.

ಬೆಳಿಗ್ಗೆಯಿಂದಲೇ ಪ್ರಮುಖ ಮುಖ್ಯ ಬಜಾರ್ ಅಂಗಡಿ–ಮುಂಗಟ್ಟುಗಳು ಬಂದ ಆಗಿದ್ದವು. ಶಾಲಾ ಕಾಲೇಜು ವಿದ್ಯಾರ್ಥಿಗಳು_ ಪ್ರಯಾಣಿಕರು ನಿಲ್ದಾಣದಲ್ಲಿ ಬಸ್ ಇಲ್ಲದೆ ಪರದಾಡಿದರು.

ಬಂದ್ ಹಿನ್ನೆಲೆಯಲ್ಲಿ ಯಾವುದೇ ಅಹಿತಕರ ಘಟನೆ ನಡೆಯದಂತೆ ಪೊಲೀಸ್ ಬಂದೋಬಸ್ತ್ ಕೈಗೊಳ್ಳಲಾಗಿತ್ತು.



# ಸತ್ಯನಾರಾಯಣ ಪೂಜೆ ಇಂದು





**■ವಿಜಯಸಾಕ್ಷಿ ಸುದ್ದಿ, ಗದಗ**

ಇಲ್ಲಿನ ಸಿದ್ದಲಿಂಗ ನಗರದಲ್ಲಿ ಶ್ರೀ ಜಾಗೃತ ಗಜಾನನ ಯುವಕ ಮಂಡಳಿ ವತಿಯಿಂದ ಪ್ರತಿಷ್ಠಾಪಿಸಿರುವ ಗಜಾನನೋತ್ಸವ ಮಂಟಪದಲ್ಲಿ ಮಂಗಳವಾರದಂದು ಮುಂಜಾನೆ 11 ಗಂಟೆಗೆ ಶ್ರೀ ಸತ್ಯನಾರಾಯಣ ಪೂಜೆ ಹಾಗೂ ಮಧ್ಯಾಹ್ನ 1 ಗಂಟೆಗೆ ಮಹಾ ಅನ್ನಸಂತರ್ಪಣೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಸೆ.27, ಬುಧವಾರದಂದು ಶ್ರೀ ಜಾಗೃತ ಗಜಾನನ ಮೇಲೆ ಹಾಕಿರುವ ಆಭರಣಗಳನ್ನು, ಅಂತರಗಾಯಿ ಮತ್ತು ಫಲಗಳನ್ನು ಸವಾಲು ಮಾಡುವ ಮೂಲಕ ಭಕ್ತರಿಗೆ ಶ್ರೀ ಗಜಾನನ ಆಶೀರ್ವಾದ ತಲುಪಿಸಿ, ನಂತರ 5 ಗಂಟೆಗೆ ವಿಸರ್ಜನಾ ಕಾರ್ಯಕ್ರಮವನ್ನು ಸಕಲ ವಾದ್ಯಗಳೊಂದಿಗೆ ಪ್ರಾರಂಭಿಸುವುದು ಎಂದು ಮಂಡಳಿಯ ಡಾ. ಜಯಕುಮಾರ ಶಿ ಬ್ಯಾಳಿ, ಸಿದ್ದು ಅಂದಾನಗೌಡ್ರ, ಸೂರಜ್ ಜಿಗಜಿನ್ನಿ, ಮಂಜು ಅಂಗಡಿ, ದೀಪಕ ಬೊಮ್ಮನಹಳ್ಳಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಡಾ. ಪಂ.ಪುಟ್ಟರಾಜ ಗುರುವರ್ಯರ 13ನೇ ಪುಣ್ಯಸ್ಮರಣೆಯ ಗುರು ಗುಣ ಗಾನ ಕವಿಗೋಷ್ಠಿ

# ಕವಿಯಾದವನಿಗೆ ಸಾಮಾಜಿಕ ಜವಾಬ್ದಾರಿ ಇರಬೇಕು




**■ವಿಜಯಸಾಕ್ಷಿ ಸುದ್ದಿ, ಗದಗ**

ಪುಟ್ಟರಾಜರು ಈ ಶತಮಾನದ ಸೋಜಿಗ. ಅಂತರಂಗದ ಕಣ್ಣುಗಳ ಮೂಲಕ ಜಗತ್ತಿನ್ನು ನೋಡಿ, ಸಾಹಿತ್ಯದ ಮೂಲಕ ಜನಮಾನಸವನ್ನು ತಿದ್ದಿ–ತೀಡುವ ಕಾರ್ಯವನ್ನು ಮಾಡಿದ್ದಾರೆ. ಅವರ ಸಾಹಿತ್ಯದ ಕುರಿತು ವಿಚಾರ ಸಂಕಿರಣ ಆಯೋಜಿಸುವ ಅವಶ್ಯಕತೆ ಇದೆ. ಕವಿಯಾದವನಿಗೆ ಸಾಮಾಜಿಕ ಜವಾಬ್ದಾರಿ ಇರಬೇಕು. ಸಮಾಜದ ಓರೆಕೋರೆಗಳನ್ನು ಗಮನಿಸಿ, ಇದನ್ನು ಸರಿಪಡಿಸುವ ರೀತಿಯಲ್ಲಿ ಸಾಹಿತ್ಯ ರಚನೆಯಾಗಬೇಕು ಎಂದು ಗದಗ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾಧ್ಯಕ್ಷ, ಸಾಹಿತಿ ವಿವೇಕಾನಂದಗೌಡ ಪಾಟೀಲ್ ಹೇಳಿದರು. ಅವರು ಡಾ. ಪಂ.ಪುಟ್ಟರಾಜ ಸೇವಾ ಸಮಿತಿ ಗದಗ, ಕಲಾ ವಿಕಾಸ ಪರಿಷತ್ ಗದಗ ಇವುಗಳ ಸಂಯುಕ್ತ ಆಶ್ರಯದಲ್ಲಿ ರವಿವಾರ ನಗರದ ಶ್ರೀ ಅಡವೀಂದ್ರ ಸ್ವಾಮಿಮಠದಲ್ಲಿ, ಡಾ. ಪಂ.ಪುಟ್ಟರಾಜ ಗುರುವರ್ಯರಿಗೆ 'ಸಾವಿರದ ಶರಣು ಸಮರ್ಪಣೆ' 13ನೇ ಪುಣ್ಯಸ್ಮರಣೆಯ ಗುರು ಗುಣ ಗಾನ ಕವಿಗೋಷ್ಠಿ ಮತ್ತು ಸಂಗೀತ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು. ಸಮಾರಂಭದ ದಿವ್ಯ ಸಾನ್ನಿಧ್ಯ ವಹಿಸಿದ್ದ ಶ್ರೀ ಮ.ಘ.ಚ. ಅಭಿನವ ಪಂಚಾಕ್ಷರ ಶಿವಾಚಾರ್ಯರು ಬೃಹನ್ಮಠ ಅಡ್ನೂರು ಇವರು ಆಶೀರ್ವಚನ ನೀಡಿ, ಪೂಜ್ಯ ಗುರು ಪುಟ್ಟರಾಜರು ಈ ನೆಲದ ನಡೆದಾಡುವ ದೇವರಾಗಿ ಸಂಗೀತ ಕ್ಷೇತ್ರಕ್ಕೆ ಮಾತ್ರವಲ್ಲದೆ, ಸಾಹಿತ್ಯ ಕ್ಷೇತ್ರಕ್ಕೂ ಅಪಾರ ಕೊಡುಗೆ ನೀಡಿದ್ದಾರೆ. ರಾಜ್ಯದಾದ್ಯಂತ ಪುಟ್ಟರಾಜರ ಸಾಹಿತ್ಯ ಪ್ರಚಾರ ಸೇವೆ ಮಾಡಿಕೊಂಡು ಬರುತ್ತಿರುವ ಡಾ. ಪಂ.ಪುಟ್ಟರಾಜ ಸೇವಾ ಸೇವಾ ಸಮಿತಿಯ ಕಾರ್ಯ ಶ್ಲಾಘನೀಯವೆಂದರು.

ಡಾ. ಎಸ್.ವಾಯ್ ಚಿಕ್ಕಟಿ, ಡಾ. ಶಕುಂತಲಾ ಸಿಂಧೂರ, ಡಾ. ರಶ್ಮಿ ಅಂಗಡಿ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಮಾತನಾಡಿದರು. ಡಾ. ಪಂ.ಪುಟ್ಟರಾಜ ಸೇವಾ ಸಮಿತಿ ಗದಗ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಡಾ. ದೇವು ಹಡಪದ ಮುಂಡರಗಿ, ಅಡವೀಂದ್ರಸ್ವಾಮಿ ಮಠದ ಶಿವಾಚಾರ್ಯ ಸ್ವಾಮಿಜಿ ಹೊಸಹಳ್ಳಿಮಠ, ಶಿವಾನುಭವ ಸಮಿತಿಯ ಚೇರಮನ್ ಕುಂದ್ರಾಳ ಹಿರೇಮಠ ವೇದಿಕೆಯಲ್ಲಿ ಇದ್ದರು.

ಎಂ.ಡಿ ಮಾದರ, ಮಂಜುಳಾ ವೆಂಕಟೇಶಯ್ಯ, ಭಾಗ್ಯಶ್ರೀ ಹುರಕಡ್ಲಿ, ಕೆ.ಜೆ ಹೊನ್ನಾದೇವಿ, ಮಹಾಂತೇಶ ಮಲ್ಲಾರಿ ಸೊರಟೂರ, ಈಶ್ವರಪ್ಪ ಕುರಿ ಮೆಣಸಗಿ, ಕಲಾಶ್ರೀ ಹಾದಿಮನಿ ನರಗುಂದ, ನೀಲಮ್ಮ ಅಂಗಡಿ, ಬಸವರಾಜ ನಾಗೂರು ಮುದ್ದೇಬಿಹಾಳ, ಆರ್.ಬಿ ಪ್ರಿಯಾಂಕ ರಾಯಚೂರು, ಸೋಮಶೇಖರ ಬಾರ್ಕಿ, ಎಚ್.ಬಿ ಶೆಡ್ಲಗೇರಿ, ವಿಜಯಲಕ್ಷ್ಮೀ ವಡ್ಡಟ್ಟಿ ಬೆಳವಣಕಿ, ಚಂದ್ರಪ್ಪ ಬಾರಂಗಿ ಹಾವೇರಿ, ಹುಚ್ಚೀರಪ್ಪ ವೀರಪ್ಪ ಈಟಿ ಗಜೇಂದ್ರಗಡ, ಶಿವಾನಂದ ಎನ್ ಹೊನಗುಡಿ, ಅಕ್ಕಮಹಾದೇವಿ ಕಮತ, ಭೀಮಾಂಬಿಕಾ ವಾಲಿ ಬಾಗಲಕೋಟೆ ಇವರುಗಳಿಂದ ಪುಟ್ಟರಾಜರ ಕುರಿತಾದ ಕವನಗಳ ವಾಚನ ನಡೆಯಿತು. ಸೇವಾ ಸಮಿತಿಯ ಜಿಲ್ಲಾ ಸಂಘಟನಾ ಕಾರ್ಯದರ್ಶಿ ಮಂಜುನಾಥ ಮುಧೋಳ ಸ್ವಾಗತಿಸಿದರು. ಗದಗ ತಾಲೂಕಾ ಕಸಾಪ ಕಾರ್ಯದರ್ಶಿ ಪ್ರೊ. ಬಸವರಾಜ ನೆಲಜೇರಿ ಕಾರ್ಯಕ್ರಮ ನಿರೂಪಿಸಿದರು. ಜಿಲ್ಲಾ ಸಂಚಾಲಕ ಶಿವು ವಾಲಿಕಾರ ವಂದಿಸಿದರು.

ಡಾ. ಪಂ. ಪುಟ್ಟರಾಜ ಸೇವಾ ಸಮಿತಿಯ ಸಂಸ್ಥಾಪಕ ರಾಜ್ಯಾಧ್ಯಕ್ಷ ಮತ್ತು ಕಲಾ ವಿಕಾಸ ಪರಿಷತ್ ಸಂಸ್ಥಾಪಕರೂ ಆದ ವೇ. ಚನ್ನವೀರಸ್ವಾಮಿ ಹಿರೇಮಠ (ಕಡಣಿ) ಇವರು ನುಡಿ ನಮನ ಸಲ್ಲಿಸಲಿದರು. ಸಮಿತಿಯ ಗದಗ ಜಿಲ್ಲಾಧ್ಯಕ್ಷ ಮಂಜುನಾಥ ಹಳ್ಳೂರಮಠ ಬೆಳಧಡಿ ಸಮಾರಂಭದ ಅಧ್ಯಕ್ಷತೆ ವಹಿಸಿಕೊಂಡಿದ್ದರು. ಶ್ರೀ ವೀರೇಶ್ವರ ಪುಣ್ಯಾಶ್ರಮದ ಶಶಿಧರ ಕಲಬುರ್ಗಿ, ಪ್ರದೀಪಕುಮಾರ ನೆರ್ತಿ ಗುರು ಪುಟ್ಟರಾಜರನ್ನು ಕುರಿತು ಕಡಣಿ ಶಾಸ್ತ್ರೀಯವರು ರಚಿಸಿದ ಕವನಗಳ ಗಾಯನ ಮಾಡಿದರು. ಶಶಿಕುಮಾರ ಅವರಾದ ತಬಲಾಸಾಥ ನೀಡಿದರು.

ಕರ್ನಾಟಕ ಸರ್ಕಾರ
**ಕಾರ್ಯಪಾಲಕ ಅಭಿಯಂತರರು**
**ಲೋಕೋಪಯೋಗಿ ಇಲಾಖೆ ವಿಭಾಗ ಗದಗ**
**Ph No : 08372-238782 Mail : eepwdgad@gmail.com, eepwdgad@rediffmail.com**
ನಂ:ಕಾನಿಇಂಗಃಲೋಇ:ಪಿಬಿ–1 5 :ವಿವಿಧ:2023–24/2660 ದಿ:25/09/2023

**ಅಲ್ಪಾವಧಿ ಟೆಂಡರ್ ಪ್ರಕಟಣೆ**

ಕರ್ನಾಟಕ ರಾಜ್ಯಪಾಲರ ಪರವಾಗಿ ಈ ಕೆಳಗೆ ಸಹಿ ಮಾಡಿದ ಅಧಿಕಾರಿಯವರಿಂದ ಲೋಕೋಪಯೋಗಿ ಇಲಾಖೆ ಗದಗ ವಿಭಾಗದಡಿ ವಿವಿಧ ಲೆಕ್ಕ ಶೀರ್ಷಿಕೆ ಅನುದಾನದ ಅಡಿಯಲ್ಲಿಯ ಒಟ್ಟು **82.89** ಲಕ್ಷ ಮೊತ್ತದಲ್ಲಿ ಒಟ್ಟು **11 ಕಾಮಗಾರಿಗಳಿಗೆ** (ಕನಿಷ್ಟ ಮೊತ್ತ ರೂ: **6.00 ಲಕ್ಷ** ಗರಿಷ್ಟ ಮೊತ್ತ ರೂ: **11.88 ಲಕ್ಷ**) ಕೆಪಿಪಿಪಿ (kppp) ನಲ್ಲಿ ನೊಂದಣಿ ಮಾಡಿಸಿದ ಲೋಕೋಪಯೋಗಿ ಇಲಾಖೆಯ ಅರ್ಹ ಗುತ್ತಿಗೆದಾರರಿಂದ ಕೆಪಿಪಿಪಿ (kppp) ಸ್ಟಾಂಡರ್ಡ ಬಿಡ್ ಡಾಕುಮೆಂಟ್ ಕೆ ಡಬ್ಲ್ಯೂ– 1 ರ ಪ್ರಕಾರ ಐಟಂವಾರು ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಸಂಪೂರ್ಣ ವಿವರಗಳಿಗಾಗಿ ಅಂತರ್ ಜಾಲ ವಿಳಾಸ **http://www.kppp.karnataka.gov.in/** ದಲ್ಲಿ ನೋಡಿಕೊಳ್ಳಬಹುದು.

**Work Indent No :** 3871, 3674, 3735, 3719, 4455-SC, 4459-SC, 4486-ST, 4490-SC, 4493-ST, 4591, 4257 ಮೇಲಿನ ಕಾಮಗಾರಿಗಳ ಟೆಂಡರ ವಿವರ ಪಶ್ನೋತ್ತರ ದಿನಾಂಕ : **27–09–2023,** ಟೆಂಡರ್ ಸಲ್ಲಿಸುವ ದಿನಾಂಕ : **03–10–2023** ಆರ್ಥಿಕ ಬಿಡ್ ತೆರೆಯುವ ದಿನಾಂಕ : **04–10–2023.**

ಜಿ.ಎಸ್.ಟಿ ಮೊತ್ತವನ್ನು ಚಾಲ್ತಿಯಲ್ಲಿರುವ ಸರ್ಕಾರದ ಆದೇಶದಂತೆ ಪಾವತಿಸಲಾಗುವದು. ಗುತ್ತಿಗೆ ಅವಧಿಯನ್ನು ಗುತ್ತಿಗೆದಾರರ ವಿಳಂಬದಿಂದ ವಿಸ್ತರಿಸಿದಲ್ಲಿ ವಿಸ್ತೃತ ಗುತ್ತಿಗೆ ಅವಧಿಯಲ್ಲಿ ಆಗುವ ಜಿಎಸ್‌ಟಿ ಹೆಚ್ಚಳವನ್ನು ಗುತ್ತಿಗೆದಾರರೇ ಭರಿಸತಕ್ಕದ್ದು.

**ಸಹಿ/– ಕಾರ್ಯಪಾಲಕ ಅಭಿಯಂತರರು,**
**ಲೋಕೋಪಯೋಗಿ ಇಲಾಖೆ, ವಿಭಾಗ, ಗದಗ**

ವಾಸಾಸಂಇ/ಗದಗ/ಕೆಎಸ್‌ಎಂಸಿಎ/206/2023–24

### ಜಿಲ್ಲಾ ಮಟ್ಟದ ಜನತಾ ದರ್ಶನ- ಜನರ ಸಮಸ್ಯೆಗೆ ಸ್ಪಂದಿಸಿದ ಸಚಿವ ತಿಮ್ಮಾಪೂರ

# ಜನರ ಬಳಿಯೇ ಆಡಳಿತ ವ್ಯವಸ್ಥೆ



ಜನತಾ ದರ್ಶನ ಕಾರ್ಯಕ್ರಮ ಜಿಲ್ಲಾ ಮಟ್ಟದಲ್ಲಿ ಅಷ್ಟೇ ಅಲ್ಲ ತಾಲೂಕಾ ಮಟ್ಟದಲ್ಲಿಯೂ ಹಮಿಕೊಳ್ಳಲಾಗುತ್ತಿದ್ದು, ಬರುವ ಅಕ್ಟೋಬರ 10 ರಂದು ತೇರದಾಳದಲ್ಲಿ ಜನತಾ ದರ್ಶನ ಕಾರ್ಯಕ್ರಮ ನಡೆಸಲಾಗುತ್ತಿದೆ. ಈ ಭಾಗದ ಜನ ತಮ್ಮ ಅಹವಾಲುಗಳಿಗೆ ಪರಿಹಾರವನ್ನು ಕಂಡುಕೊಳ್ಳಬಹುದಾಗಿದೆ ಎಂದರು. ಸಾಧ್ಯವಾದಷ್ಟು ಸ್ಥಳದಲ್ಲಿಯೇ ಸಮಸ್ಯೆಗೆ ಪರಿಹಾರ ಒದಗಿಸುವ ಕಾರ್ಯ ಜನತಾ ದರ್ಶನದಲ್ಲಿ ಮಾಡಲಾಗುತ್ತದೆ ಎಂದರು.

**-ಆರ್.ಬಿ. ತಿಮ್ಮಾಪೂರ,** ಜಿಲ್ಲಾ ಉಸ್ತುವಾರಿ ಸಚಿವರು.



**■ವಿಜಯಸಾಕ್ಷಿ ಸುದ್ದಿ, ಬಾಗಲಕೋಟೆ**

ಜನಸಾಮಾನ್ಯರ ಸಮಸ್ಯೆಗಳಿಗೆ ಸ್ಪಂದಿಸಿ ತೀವ್ರ ಪರಿಹಾರ ಕಲ್ಪಿಸುವ ಮೂಲಕ ಜನರ ಬಳಿಯಲ್ಲಿಯೇ ಆಡಳಿತ ವ್ಯವಸ್ಥೆ ತರುವ ಉದ್ದೇಶ ಸರಕಾರದ್ದಾಗಿದೆ ಎಂದು ಅಬಕಾರಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ.ತಿಮ್ಮಾಪೂರ ಹೇಳಿದರು.

ಜಿಲ್ಲಾಡಳಿತ ಭವನದ ಮುಖ್ಯ ಆವರಣದಲ್ಲಿ ಸೋಮವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ ಹಾಗೂ ಪೊಲೀಸ್ ಇಲಾಖೆ ಸಹಯೋಗದಲ್ಲಿ ಹಮ್ಮಿಕೊಂಡ ಜಿಲ್ಲಾ ಮಟ್ಟದ ಜನತಾ ದರ್ಶನ ಕಾರ್ಯಕ್ರಮವನ್ನು ಉದ್ಘಾಟಿಸಿ, ಸಾರ್ವಜನಿಕರಿಂದ ಅಹವಾಲು ಸ್ವೀಕರಿಸಿ ಮಾತನಾಡಿದ ಅವರು, ಸಮಸ್ಯೆ ಅಧಿಕಾರಿಗಳ ಬಳಿ ಕಗ್ಗಂಟಾಗಿ ಇರಬಾರದು ಎನ್ನುವುದು ಮುಖ್ಯಮಂತ್ರಿಗಳ ಉದ್ದೇಶವಾಗಿದೆ. ಜನರ ಸಮಸ್ಯೆಗಳಿಗೆ ಪರಿಹಾರ ಕಲ್ಪಿಸುವುದು ಜನತಾ ದರ್ಶನ ಕಾರ್ಯಕ್ರಮದ ಉದ್ದೇಶವಾಗಿದೆ ಎಂದರು.

ಪದೇ ಪದೇ ಕಚೇರಿಗೆ ಜನ ಅಲೆಯುವುದು ತಪ್ಪಬೇಕು. ಸಮಸ್ಯೆ ತಂದಾಗ ಸಹಾನುಭೂತಿಯಿಂದ ಆಲಿಸಿ ಅವರನ್ನು ಪ್ರೀತಿಯಿಂದ ಕಾಣಬೇಕು. ಇದು ನಮ್ಮ ಸರಕಾರ ಎಂಬ ಭಾವನೆ ಅವರಲ್ಲಿ ಬರುವಂತೆ ಅಧಿಕಾರಿಗಳ ಕೆಲಸ ಮಾಡಬೇಕು. ಜನತೆ ಸಮಸ್ಯೆ ತಂದಾಗ ಅದಕ್ಕೆ ಪರಿಹಾರ ದೊರೆಯಬೇಕು. ಜನರ ಸಮಸ್ಯೆಗಳನ್ನು ಪರಿಹರಿಸುವ ನಿಟ್ಟಿನಲ್ಲಿ ಜನತಾ ದರ್ಶನ ಹಮ್ಮಿಕೊಂಡಿದ್ದು, ಮುಖ್ಯಮಂತ್ರಿಗಳ ಇಚ್ಚೆಗೆ ಚ್ಯೂತಿ ಬಾರದ ರೀತಿಯಲ್ಲಿ ಅಹವಾಲು ತೀವ್ರವಾಗಿ ಬಗೆಹರಿಸುವ ಕಾರ್ಯವಾಗಬೇಕು ಎಂದರು.

ಮುಖ್ಯಮಂತ್ರಿಗಳ ಮುಂದಾಲೋಚನೆ, ಬಡವರ ಮೇಲಿದ್ದ ಅವರ ಕಾಳಜಿಯಿಂದ ನಾಡಿನ ಜನತೆಯ ಕೊನೆಯ ವ್ಯಕ್ತಿಗೂ ಹಸಿವಿನಿಂದ ಬಳಲಬಾರದೆಂದು ಅನ್ನಭಾಗ್ಯ ಯೋಜನೆ, ಮನೆಯನ್ನು ಬೆಳಗುವ ಬೆಳಕಿನ ವ್ಯವಸ್ಥೆ ಕಲ್ಪಿಸುವ ಉದ್ದೇಶದಿಂದ ಉಚಿತ ವಿದ್ಯುತ್ ನೀಡುವ ಗೃಹಜ್ಯೋತಿ ಯೋಜನೆ, ಗೃಹಿಣಿ ತನ್ನ ಮನೆಯ ಜವಾಬ್ದಾರಿ ನಿರ್ವಹಿಸಲು ಪ್ರತಿ ಕುಟುಂಬದ ಯಜಮಾನಿಗೆ 2 ಸಾವಿರ ರೂ. ನೀಡುವ ಗೃಹಲಕ್ಷ್ಮೀ ಯೋಜನೆ, ಶಕ್ತಿ ಯೋಜನೆಯಡಿ ಉಚಿತ ಬಸ್ ಪ್ರಯಾಣದ ಸೌಲಭ್ಯ ಹಾಗೂ ನಿರುದ್ಯೋಗಿಗಳಿಗೆ ಸಹಾಯಧನ ನೀಡುವ ಯುವನಿಧಿ ಯೋಜನೆ ಜಾರಿಗೆ ತರಲಾಗಿದೆ ಎಂದರು.

ಜಿಲ್ಲಾಧಿಕಾರಿ ಕೆ.ಎಂ.ಜಾನಕಿ ಪ್ರಾಸ್ತಾವಿಕವಾಗಿ ಮಾತನಾಡಿದವರು. ಕಾರ್ಯಕ್ರಮದಲ್ಲಿ ಶಾಸಕ ಎಚ್.ವಾಯ್.ಮೇಟಿ, ವಿಧಾನ ಪರಿಷತ್ ಸದಸ್ಯ ಪಿ.ಎಚ್.ಪೂಜಾರ, ಶಾಸಕರಾದ ವಿಜಯಾನಂದ ಕಾಶಪ್ಪನವರ, ಜಗದೀಶ ಗುಡಗುಂಟಿ, ಭೀಮಸೇನ ಚಿಮ್ಮನಕಟ್ಟಿ, ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಮೊಹಮ್ಮದ ಮೊಹಸಿನ್, ಜಿ.ಪಂ ಸಿಇಓ ಶಶಿಧರ ಕುರೇರ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅಮರನಾಥ ರೆಡ್ಡಿ, ಯುಕೆಪಿ ಮಹಾವ್ಯವಸ್ಥಾಪಕ ರಮೇಶ ಕಳಸದ, ವಿಶೇಷ ಜಿಲ್ಲಾಧಿಕಾರಿ ಸೋಮಲಿಂಗ ಗೆನ್ನೂರ, ಅಪರ ಜಿಲ್ಲಾಧಿಕಾರಿ ಪರಶುರಾಮ ಶಿನ್ನಾಳಕರ, ಜಿ.ಪಂ ಉಪ ಕಾರ್ಯದರ್ಶಿ ಅಮರೇಶ ನಾಯಕ, ಉಪ ವಿಭಾಗಾಧಿಕಾರಿಗಳಾದ ಶ್ವೇತಾ ಬೀಡಿಕರ, ಸಂತೋಷ ಕಾಮಗೌಡ ಸೇರಿದಂತೆ ಇತರರು ಉಪಸ್ಥಿತರಿದ್ದರು.

#### ಜನರ ಅಹವಾಲುಗಳಿಗೆ ಸ್ಪಂದಿಸಿದ ಸಚಿವರು

ಜನತಾ ದರ್ಶನ ಕಾರ್ಯಕ್ರಮದಲ್ಲಿ ನೂರಾರು ಜನ ಹೊತ್ತು ತಂದ ಸಮಸ್ಯೆಗಳಿಗೆ ಸಚಿವ ಆರ್.ಬಿ.ತಿಮ್ಮಾಪೂರ ಸ್ಪಂದಿಸುವ ಮೂಲಕ ಕೆಲವೊಂದು ಸಮಸ್ಯೆಗಳಿಗೆ ಸ್ಥಳದಲ್ಲಿಯೇ ಪರಿಹಾರ ಒದಗಿಸಿದರು. ಕಾರ್ಯಕ್ರಮದಲ್ಲಿ ವಿಧವಾ ವೇತನ, ಗೃಹಲಕ್ಷ್ಮೀ, ಅಂಗನವಾಡಿ ಕಟ್ಟಡ, ಅಂಗನವಾಡಿಗೆ ಫ್ರಿಡ್ಜ್ ವ್ಯವಸ್ಥೆ, ವಸತಿ ನಿಲಯಕ್ಕೆ ಪ್ರವೇಶ, ಪೋಡಿ ಸೇರಿದಂತೆ ಇತರೆ ಇಲಾಖೆಗಳಿಗೆ ಸಂಬಂಧಿಸಿದ ಒಟ್ಟು 614 ಅಹವಾಲುಗಳು ಸ್ವೀಕೃತಗೊಂಡಿದ್ದವು. ಪ್ರತಿಯೊಂದು ಅಹವಾಲುಗಳಿಗೆ ಸ್ವೀಕೃತಿ ನೀಡಲಾಯಿತು. ಅರ್ಜಿ ಸ್ವೀಕೃತಿಗೆ ಹಲವಾರು ಕೌಂಟರ್‌ಗಳ ವ್ಯವಸ್ಥೆ ಮಾಡಲಾಗಿತ್ತು.

## ಹಣಬರಹವನ್ನು ಯಾವುದರಿಂದಲೂ ಅಳಿಸಲು ಸಾಧ್ಯವಿಲ್ಲ



**■ವಿಜಯಸಾಕ್ಷಿ ಸುದ್ದಿ, ಗದಗ**

ಮನುಷ್ಯನ ಜೀವನದಲ್ಲಿ ಆರ್ಥಿಕತೆ ಮುಖ್ಯವಲ್ಲ, ಸಾರ್ಥಕತೆ ಮುಖ್ಯ. ಪರರಿಗೆ, ಹಸಿದವರಿಗೆ ಅನ್ನ ನೀಡಿ, ದುಃಖದಲ್ಲಿರುವವರ ಜೊತೆಗೆ ಭಾಗಿಯಾಗಿ, ಸಾಂತ್ವನ ಹೇಳಿ, ಅವರ ಕಣ್ಣೀರನ್ನು ಒರಸಿದರೆ ಭಗವಂತನ ದರ್ಶನವಾಗುತ್ತದೆ. ಆಗ ಮಾತ್ರ ನಿಮ್ಮ ಜೀವನ ಸಾರ್ಥಕವಾಗಲಿದೆ ಎಂದು ಕೊಪ್ಪಳದ ಗವಿಸಿದ್ಧೇಶ್ವರ ಮಠದ ಶ್ರೀ ಅಭಿನವ ಗವಿಸಿದ್ಧೇಶ್ವರ ಮಹಾಸ್ವಾಮಿಗಳು ನುಡಿದರು.

ಅವರು ನಗರದ ಶ್ರೀ ಗಾನಯೋಗಿ ಪಂಚಾಕ್ಷರಿ ಗವಾಯಿಗಳವರ ಮಾರುಕಟ್ಟೆ ಪ್ರಾಂಗಣ, ಎಪಿಎಂಸಿ ಯಾರ್ಡ್‌ನಲ್ಲಿ ಶ್ರೀ ಗಜಾನನ ಉತ್ಸವ ಸಮಿತಿ ವತಿಯಿಂದ ಗಣೇಶ ಹಬ್ಬದ ಪ್ರಯುಕ್ತ ಸೋಮವಾರ ಬೆಳಿಗ್ಗೆ ಹಮ್ಮಿಕೊಂಡಿದ್ದ ಸತ್ಯನಾರಾಯಣ ಪೂಜಾ ಕಾರ್ಯಕ್ರಮ, ಮಹಾ ಅನ್ನಸಂತರ್ಪಣೆ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡಿದರು.

ಒಂದು ತುತ್ತು ಅನ್ನ ಊಟ ಮಾಡುವಾಗಲೂ ಯೋಚನೆ ಮಾಡಿ, ನನ್ನ ಬೆವರ ಹನಿಯ ಶ್ರಮದ ಫಲವೇ ಈ ಅನ್ನ ಎಂದು. ಪರರ ದುಡ್ಡಿಗೆ ಆಸೆಪಡದೆ, ಕಷ್ಟಪಟ್ಟು ದುಡಿದು ಗಳಿಸಿ, ಗಳಿಸಿದ ಹಣವನ್ನು ಪರೋಪಕಾರಕ್ಕೆ ವಿನಿಯೋಗಿಸಿ. ಹಣೆಯ ಬರಹವನ್ನು ಯಾವುದರಿಂದಲೂ ಅಳಿಸಲು ಸಾಧ್ಯವಿಲ್ಲ. ಆದರೆ ನಿಮ್ಮ ಪರಿಶ್ರಮದ ಬೆವರ ಹನಿಯಿಂದ ಮಾತ್ರ ಸಾಧ್ಯ. ಮಕ್ಕಳಿಗೆ ಒಳ್ಳೆಯ ಶಿಕ್ಷಣ ನೀಡಿ ಪ್ರಾಮಾಣಿಕತೆಯಿಂದ ಬದುಕುವದನ್ನು ಕಲಿಸಿ ಎಂದರು.

ಕಾರ್ಯಕ್ರಮದ ಸಮ್ಮುಖವನ್ನು ಸುಕ್ಷೇತ್ರ ಬಳಗಾನೂರ ಪ.ಪೂ.ಶ್ರೀ ಶಿವಶಾಂತವೀರ ಶರಣರು ವಹಿಸಿದ್ದರು. ಗದಗ ವೀರೇಶ್ವರ ಪುಣ್ಯಾಶ್ರಮದ ಪ.ಪೂ ಶ್ರೀ ಕಲ್ಲಯ್ಯಜ್ಜನವರು ಪೂಜಾ ಕಾರ್ಯಕ್ರಮದಲ್ಲಿ ಭಾಗವಹಿದ್ದರು. ಈ ಸಂದರ್ಭದಲ್ಲಿ ಗಜಾನನ ಉತ್ಸವ ಸಮಿತಿಯ ಅಧ್ಯಕ್ಷ ತಿಮ್ಮಣ್ಣ ಕೊನರಡ್ಡಿ, ಪದಾಧಿಕಾರಿಗಳು, ಸರ್ವ ಸದಸ್ಯರು, ಎಪಿಎಂಸಿ ಯಾರ್ಡ್‌ನ ಗಣ್ಯ ವರ್ತಕರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

## ಡಿಜೆ ಸದ್ದಿಗೆ ಕುಣಿದು ಕುಪ್ಪಳಿಸಿದ ಯುವಕರು

**■ವಿಜಯಸಾಕ್ಷಿ ಸುದ್ದಿ, ಶಿರಹಟ್ಟಿ**

ಪಟ್ಟಣದಲ್ಲಿ ರವಿವಾರ 7ನೇ ದಿನದ ಗಣಪತಿ ವಿಸರ್ಜನೆ ಪ್ರಯುಕ್ತ ಹಿಂದೂ ಮಹಾಗಣಪತಿ ಮತ್ತು ಡಾ. ಬಿ.ಆರ್ ಅಂಬೇಡ್ಕರ ನಗರದ ಸಾರ್ವಜನಿಕ ಗಣಪತಿಯ ವಿಸರ್ಜನಾ ಕಾರ್ಯಕ್ರಮದಂಗವಾಗಿ ಕಿವಿಗಡಚಿಕ್ಕುವ ಡಿಜೆ ಸದ್ದಿಗೆ ಯುವಕರು



ಕುಣಿದು ಕುಪ್ಪಳಿಸಿದರು. ಇದಲ್ಲದೆ, ವಿವಿಧ ಸ್ಥಳಗಳಲ್ಲಿ ಪ್ರತಿಷ್ಠಾಪಿಸಿದ್ದ ಗಣಪತಿ ಮೂರ್ತಿಗಳ ವಿಸರ್ಜಯೂ ನಡೆಯಿತು. ಎಲ್ಲ ಕಡೆಗಳಲ್ಲಿಯೂ ಸಹ ವಿಜೃಂಭಣೆಯಿಂದ ಭವ್ಯ ಮೆರವಣಿಗೆಯು ಮಧ್ಯ ರಾತ್ರಿಯವರೆಗೂ ಪ್ರಮುಖ ಬೀದಿಗಳಲ್ಲಿ ಸಂಚರಿಸಿ, ಗಣಪತಿಯನ್ನು ವಿಸರ್ಜನೆ ಮಾಡಲಾಯಿತು. ರಸ್ತೆಯ ಇಕ್ಕೆಲಗಳಲ್ಲಿ ಅಪಾರ ಜನಸ್ತೋಮ ಮೆರವಣಿಗೆಯನ್ನು ವೀಕ್ಷಿಸಿದರು. ಯಾವುದೇ ಅಹಿತಕರ ಘಟನೆಗಳು ಜರುಗದಂತೆ ಮುಂಜಾಗ್ರತಾ ಕ್ರಮವಾಗಿ ಪೊಲೀಸ್ ವರಿಷ್ಠಾಧಿಕಾರಿ ಬಿ.ಎಸ್ ನೇಮಗೌಡ ಹಾಗೂ ಡಿಎಸ್‌ಪಿ ಮಾರ್ಗದರ್ಶನದಲ್ಲಿ ಶಿರಹಟ್ಟಿ ಸಿಪಿಐ ನಾಗರಾಜ ಮಾಢಳ್ಳಿ ಮತ್ತು ಪಿಎಸ್‌ಐ ಈರಣ್ಣ ರಿತ್ತಿ ಬಿಗಿ ಪೊಲೀಸ್ ಬಂದೋಬಸ್ತ್ ವ್ಯವಸ್ಥೆಯನ್ನು ಕಲ್ಪಿಸಿದ್ದರು.

## ಹಬ್ಬಗಳು ನಾಡಿನ ಸಂಸ್ಕೃತಿಯ ಪ್ರತೀಕ

**■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ**

ಪಟ್ಟಣದ ಹಾವಳಿ ಆಂಜನೇಯ ದೇವಸ್ಥಾನದ ಹತ್ತಿರ ಹಿಂದೂ ಮಹಾಸಭಾ ಮಂಡಳಿಯಿಂದ ಪ್ರತಿಷ್ಠಾಪಿಸಿರುವ ಗಣೇಶನ ಮಹಾಮಂಟಪಕ್ಕೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿ.ಎಸ್ ನೇಮಗೌಡ ಭೇಟಿ ನೀಡಿ ಸಲಹೆ-ಸೂಚನೆ ನೀಡಿದರು.

ಈ ವೇಳೆ ಮಾತನಾಡಿದ ಅವರು, ಹಬ್ಬಗಳು ನಾಡಿನ ಸಂಸ್ಕೃತಿಯ ಪ್ರತೀಕಗಳಾಗಿದ್ದು, ಅವುಗಳಿಗೆ ಧಕ್ಕೆಯಾಗದಂತೆ ಶಾಂತಿ-ಸೌಹಾರ್ದತೆಯಿಂದ ಆಚರಿಸಬೇಕು. ಆಚರಣೆಯ ನೆಪದಲ್ಲಿ ಯಾವುದಕ್ಕೂ ಅಪಚಾರವಾಗದಂತೆ, ಯಾರಿಗೂ ತೊಂದರೆಯಾಗದಂತೆ ಹಬ್ಬಗಳ ಮೂಲ ಉದ್ದೇಶವನ್ನು ಗಮನದಲ್ಲಿಟ್ಟುಕೊಂಡು ಶಿಸ್ತು, ಸಂಯಮ ಮತ್ತು ಸಂಪ್ರದಾಯ



ಮೆರೆಯಬೇಕು. 'ಮಾನವ ಧರ್ಮಕ್ಕೆ ಜಯವಾಗಲಿ-ಧರ್ಮದಿಂದಲೇ ವಿಶ್ವಕ್ಕೆ ಶಾಂತಿ' ಎಂಬ ಶಾಂತಿಮಂತ್ರ ಮೊಳಗಿದ ನೆಲದಲ್ಲಿ ಪರಸ್ಪರ ಸ್ನೇಹ, ಸೌಹಾರ್ದತೆಯಿಂದ ಬದುಕಬೇಕು ಎಂದರು.

ಈ ವೇಳೆ ಹಿಂದೂ ಮಹಾಸಭಾ ಗಣೇಶ ಮಂಡಳಿಯ ವತಿಯಿಂದ ವರಿಷ್ಠಾಧಿಕಾರಿಗಳನ್ನು ಸನ್ಮಾನಿಸಲಾಯಿತು. ಮಂಡಳಿಯ ಸದಸ್ಯರು, ಇಲಾಖೆಯ ಅಧಿಕಾರಿಗಳು, ಸಿಬ್ಬಂದಿಗಳು ಹಾಜರಿದ್ದರು.

## ಇಂದು 'ಆಯುಷ್ಮಾನ್ ಭವ್ ಆರೋಗ್ಯ ಮೇಳ' ಕಾರ್ಯಕ್ರಮ

**■ವಿಜಯಸಾಕ್ಷಿ ಸುದ್ದಿ, ಗದಗ**

ಕೇಂದ್ರ ಸರ್ಕಾರದ ಮಾರ್ಗ ಸೂಚಿಯನ್ವಯ, ಈಗಾಗಲೇ ಸನ್ಮಾನ್ಯ ರಾಷ್ಟ್ರಪತಿಯವರು ಆಯುಷ್ಮಾನ್ ಭವ್ ಅಭಿಯಾನದ ಶುಭಾರಂಭವನ್ನು ಸೆಪ್ಟೆಂಬರ್ 13 ರಂದು ಮಾಡಿದ್ದು, ಸದರಿ ಅಭಿಯಾನವು ಸೆಪ್ಟೆಂಬರ್ 17 ರಂದು ಜಾರಿಗೆ ಬಂದಿದ್ದು, ಈ ಕಾರ್ಯಕ್ರಮದಡಿಯಲ್ಲಿ ಪ್ರತಿ ಮಂಗಳವಾರ ಜಿಲ್ಲೆಯ ಎಲ್ಲಾ ಆರೋಗ್ಯ ಮತ್ತು ಕ್ಷೇಮ ಕೇಂದ್ರಗಳಲ್ಲಿ, ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ, ನಗರ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ, ನಮ್ಮ ಕ್ಲಿನಿಕ್‌ಗಳಲ್ಲಿ ವಿಶೇಷವಾಗಿ ಸಮುದಾಯ ಆರೋಗ್ಯ ಕೇಂದ್ರ ಲಕ್ಷ್ಮೇಶ್ವರ ಹಾಗೂ ಗಜೇಂದ್ರಗಡದಲ್ಲಿ ಎಲ್ಲಾ ತಜ್ಞ ವೈದ್ಯರು ಸದರಿ ದಿನದಂದು ಲಭ್ಯವಿರುತ್ತಾರೆ. ಸೆಪ್ಟೆಂಬರ್ 26 ರಂದು ಎಲ್ಲಾ ಆರೋಗ್ಯ ಸಂಸ್ಥೆಗಳಲ್ಲಿ ಆಯುಷ್ಮಾನ್ ಭವ್ ಆರೋಗ್ಯ ಮೇಳವನ್ನು ಹಮ್ಮಿಕೊಳ್ಳಲಾಗಿದ್ದು, ಸದರಿ ಅಭಿಯಾನವು ಡಿಸೆಂಬರ್ 31 ರವರೆಗೆ ಚಾಲ್ತಿಯಲ್ಲಿರುತ್ತದೆ. ಸದರಿ ಅಭಿಯಾನದಡಿಯಲ್ಲಿ ಸಾರ್ವಜನಿಕರು ಇದರ ಸದುಪಯೋಗ ಪಡೆದು ಕೊಳ್ಳಬೇಕೆಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ನಾನು ಯಾವುದೇ ಹುದ್ದೆಯ ಆಕಾಂಕ್ಷಿಯಲ್ಲ: ಜಿ.ಎಸ್ ಗಡ್ಡದೇವರಮಠ ಸ್ಪಷ್ಟನೆ

**■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ**

ರಾಜ್ಯದಲ್ಲಿ ನಿಗಮ ಮಂಡಳಿಗಳಿಗೆ ಗದಗ ಜಿಲ್ಲೆಯಲ್ಲಿ ಆಕಾಂಕ್ಷಿಯೆಂದು ಮಾಜಿ ಶಾಸಕ ಜಿ.ಎಸ್ ಗಡ್ಡದೇವರ ಮಠ ಅವರ ಹೆಸರು ಕೇಳಿ ಬಂದಿರುವ ಹಿನ್ನಲೆಯಲ್ಲಿ, ನಾನು ಯಾವುದೇ ಹುದ್ದೆಯ ಆಕಾಂಕ್ಷಿಯಲ್ಲ ಎಂದು ಅವರು ಸ್ಪಷ್ಟಪಡಿಸಿದ್ದಾರೆ.

ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, ಶಿರಹಟ್ಟಿ ಮತಕ್ಷೇತ್ರದಿಂದ ಎರಡು ಬಾರಿ ಶಾಸಕನಾಗಿ ಆಯ್ಕೆಯಾಗಿ ಗದಗ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷನಾಗಿಯೂ ಸೇವೆ ಸಲ್ಲಿಸಿದ್ದೇನೆ.

ಈ ಹಿಂದೆ 2013ರಲ್ಲಿ ಕಾಂಗ್ರೆಸ್ ಸರಕಾರವಿದ್ದಾಗ ನನ್ನನ್ನು ಉಗ್ರಾಣ ನಿಗಮದ ಅಧ್ಯಕ್ಷನನ್ನಾಗಿಯೂ ಮಾಡಲಾಗಿತ್ತು.

ಆದರೆ ಇದೀಗ ನಾನು ಮತ್ತೆ ನಿಗಮ ಮಂಡಳಿಯ ಆಕಾಂಕ್ಷಿ ಎನ್ನುವ ಮಾತುಗಳು ಕೇಳಿಬರುತ್ತಿರುವದು ಸತ್ಯಕ್ಕೆ ದೂರವಾಗಿದೆ.

ನಾನೊಬ್ಬ ಕಾಂಗ್ರೆಸ್ ಪಕ್ಷದ ನಿಷ್ಠಾವಂತ ಹಾಗೂ ಸಾಮಾನ್ಯ ಕಾರ್ಯಕರ್ತನಾಗಿದ್ದೇನೆ. ಯಾವುದೇ ಹುದ್ದೆಯನ್ನು ಬಯಸುವದಿಲ್ಲ



ಎಂದು ಹೇಳಿದ್ದಾರೆ.

ಇತ್ತೀಚೆಗೆ ಶಿಗ್ಲಿ ಗ್ರಾಮದಲ್ಲಿ ನಾನು ಚುನಾವಣೆಯ ನಿವೃತ್ತಿ ಘೋಷಿಸಿದ್ದು, ಯಾವುದೇ ಹುದ್ದೆಯನ್ನಾಗಲಿ, ಚುನಾವಣೆಗೆ ಸ್ಪರ್ಧಿಸುವದಾಗಲಿ ಮಾಡುವದಿಲ್ಲ ಎಂದು ಪ್ರತಿಜ್ಞೆ ಮಾಡಿದ್ದೇನೆ.

ಸಾಕಷ್ಟು ಜನ ಪಕ್ಷದ ನಿಷ್ಠಾವಂತ ಕಾರ್ಯಕರ್ತರು, ಚುನಾವಣೆಯಲ್ಲಿ ಪಕ್ಷದ ಗೆಲುವಿಗೆ ಶ್ರಮಿಸಿದವರಿದ್ದು, ಅವರಿಗೆ ಅವಕಾಶ ಮಾಡಿಕೊಡುವಂತೆ ಹೈಕಮಾಂಡ್‌ಗೆ ಮನವಿ ಮಾಡುತ್ತೇನೆ ಎಂದು ಹೇಳುವ ಮೂಲಕ ನಿಗಮ ಮಂಡಳಿಯ ಆಕಾಂಕ್ಷಿ ಎನ್ನುವ ಮಾತಿಗೆ ವಿರಾಮ ನೀಡಿದ್ದಾರೆ.

### ಮುಸ್ಲಿಂ ನೌಕರರ ಕ್ಷೇಮಾಭಿವೃದ್ಧಿ ಸಂಘದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಮಹೇಶ್ವರ ಸ್ವಾಮೀಜಿ

# ಮಠ-ಮಂದಿರಗಳು ತಮ್ಮ ಕೈಂಕರ್ಯವನ್ನು ಮುಂದುವರೆಸಿವೆ

**■ವಿಜಯಸಾಕ್ಷಿ ಸುದ್ದಿ, ಗದಗ**

ಶಿಕ್ಷಣ ಬಾಳಿಗೆ ಬೆಳಕು ನೀಡಬಲ್ಲದು. ಉನ್ನತ ಶಿಕ್ಷಣದಿಂದ ಅತ್ಯುನ್ನತ ಸ್ಥಾನ ತಲುಪಲು ಸಾಧ್ಯ ಎಂದು ಗದುಗಿನ ಅಡವೀಂದ್ರ ಸ್ವಾಮಿ ಮಠದ ಧರ್ಮದರ್ಶಿ ಪೂಜ್ಯ ಮಹೇಶ್ವರ ಸ್ವಾಮೀಜಿ ಹೊಸಳ್ಳಿಮಠ ಅಭಿಪ್ರಾಯಪಟ್ಟರು.

ಅವರು ರವಿವಾರ ನಗರದ ಕೃಷಿ ಸಂಶೋಧನಾ ಕೇಂದ್ರದ ಸಭಾಂಗಣದಲ್ಲಿ ಕರ್ನಾಟಕ ರಾಜ್ಯ ಸರಕಾರಿ ಮುಸ್ಲಿಂ ನೌಕರರ ಕ್ಷೇಮಾಭಿವೃದ್ಧಿ ಸಂಘ (ಮೇವಾ) ಗದಗ ಜಿಲ್ಲಾ ಘಟಕ ಏರ್ಪಡಿಸಿದ್ದ ಎಸ್‌ಎಸ್‌ಎಲ್‌ಸಿ, ಪಿಯುಸಿ ಪರೀಕ್ಷೆಯಲ್ಲಿ ಹೆಚ್ಚಿನ ಅಂಕಪಡೆದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಮಾತನಾಡಿದರು.

ರಾಜ್ಯದಲ್ಲಿ ವೀರಶೈವ ಮಠ-ಮಂದಿರಗಳು ಶಿಕ್ಷಣಕ್ಕೆ ಬಹು ದೊಡ್ಡ ಕೊಡುಗೆ ನೀಡಿವೆ. ಸಾಕ್ಷರತೆ ಮೂಡಿಸುವ, ಸಾಕ್ಷರತೆಯನ್ನು ಆಂದೋಲನದ ರೀತಿಯಲ್ಲಿ ಕ್ರಾಂತಿಕಾರಕ ಮತ್ತು ವೈಚಾರಿಕ



ಪ್ರಜ್ಞೆಯನ್ನು ಮೂಡಿಸಿದ ಹೆಗ್ಗಳಿಕೆ ಲಿಂಗಾಯತ, ವೀರಶೈವ ಮಠಗಳಿಗೆ ಸಲ್ಲುವದು. ಮುಂದುವರೆದ ಭಾಗವಾಗಿ ಇಂದಿಗೂ ಮಠ-ಮಂದಿರಗಳು ಉನ್ನತ ಶಿಕ್ಷಣ ಸಂಸ್ಥೆಯನ್ನು ಹುಟ್ಟು ಹಾಕಿ ತಮ್ಮ ಕೈಂಕರ್ಯವನ್ನು ಮುಂದುವರೆಸಿವೆ ಎಂದರು.

ಇಸ್ಲಾಂ ಧರ್ಮವೂ ಇದಕ್ಕೆ ಹೊರತಾಗಿಲ್ಲ. ಮಸೀದಿ, ಪ್ರಾರ್ಥನಾ ಮಂದಿರಗಳು ಭಕ್ತಿ, ಜ್ಞಾನದೊಂದಿಗೆ ಶಿಕ್ಷಣ ನೀಡುವ ಕಾರ್ಯ ಮಾಡಿವೆ. ಶಿಕ್ಷಣ, ಸಂಗೀತ, ಸಾಹಿತ್ಯಕ್ಕೆ ಮುಸ್ಲಿಂ ಸಮುದಾಯದ ಕೊಡುಗೆಯೂ ಅನುಪಮವಾದದ್ದು. ಕರ್ನಾಟಕ ರಾಜ್ಯ ಸರಕಾರಿ ಮುಸ್ಲಿಂ ನೌಕರರ ಕ್ಷೇಮಾಭಿವೃದ್ಧಿ ಸಂಘದ ಗದಗ ಜಿಲ್ಲಾ ಘಟಕ ಪ್ರತಿಭಾ ಪುರಸ್ಕಾರ ಏರ್ಪಡಿಸುವ ಮೂಲಕ ಮಕ್ಕಳ ಕಲಿಕೆಗೆ ಪ್ರೋತ್ಸಾಹಿಸುತ್ತಿರುವದು ಶ್ಲಾಘನೀಯ ಕಾರ್ಯ ಎಂದರು.

ಗದುಗಿನ ಕ್ರೆಸ್ಟ್ ಫೌಂಡೇಶನ್‌ನ ಕಾರ್ಯನಿರ್ವಾಹಕ ನಿರ್ದೇಶಕ ಮುಹಮ್ಮದ ಮನ್ಸೂರ ಅಲ್ ಖಾದ್ರಿ ,ಆರ್ಥಿಕವಾಗಿ ಹಿಂದುಳಿದ ಮುಸ್ಲಿಂ ಸಮುದಾಯ ಬಾಂಧವರು ಸಣ್ಣಪುಟ್ಟ ಉದ್ಯೋಗ ಮಾಡಿಕೊಂಡು ಉಪಜೀವನ ನಡೆಸುತ್ತ ಬಂದವರು. ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ನೀಡುವ ನಿಟ್ಟಿನಲ್ಲಿ ಹೆಚ್ಚು ಗಮನ ನೀಡಬೇಕು. ಶಿಕ್ಷಣದಿಂದ ಬದುಕಿನಲ್ಲಿ ಬದಲಾವಣೆ ತರಲು ಸಾಧ್ಯವಿದೆ ಎಂದರು. ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಮೇವಾ ಸಂಘಟನೆಯ ಅಬ್ದುಲ್‌ರಹೀಮ ಖಾಜಿ, ಸಲೀಂ ಅಹ್ಮದ ಹಂಚಿನಮನಿ, ಡಾ.ಪ್ಯಾರಅಲಿ ನೂರಾನಿ, ಅಬ್ದುಲ್‌ರಜಾಕ ಡಂ-ಕೇದ, ಮೋದಿನಸಾಬ ಬುಕ್ಕಿಟಗಾರ ಅವರು ಮಾತನಾಡಿದರು.

ಸಮಾರಂಭದಲ್ಲಿ ಸುಮಾರು 40ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು. ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಮೇವಾ ಗದಗ ಜಿಲ್ಲಾ ಅಧ್ಯಕ್ಷ ಡಾ. ಸಿ.ಎಂ ರಫಿ ಮಾತನಾಡಿದರು. ವೇದಿಕೆಯ ಮೇಲೆ ಮೇವಾದ ರಾಜ್ಯ ಸಂಘಟನಾ ಕಾರ್ಯದರ್ಶಿ ನಿಯಾಜ್‌ಅಹ್ಮದ್ ಹಂಚಿನಮನಿ, ನುಮೇರ್ ನೂರಾನಿ ಉಪಸ್ಥಿತರಿದ್ದರು.

ಡಬ್ಲ್ಯೂ.ಎಸ್ ಶಿರಹಟ್ಟಿ ಪ್ರಾರ್ಥಿಸಿದರು. ರಫೀಕ್ ಸವದತ್ತಿ ಸ್ವಾಗತಿಸಿದರು. ಸಿ.ಎಸ್ ನದಾಫ ಪ್ರಾಸ್ತಾವಿಕವಾಗಿ ಮಾತನಾಡಿದರು. ರಶೀದ್, ಫಜಲಅಹ್ಮದ್ ನಮಾಜಿ ನಿರೂಪಿಸಿದರು. ಎಂ.ಎ ಬುಕ್ಕಿಟಗಾರ ವಂದಿಸಿದರು.

ಸಮಾರಂಭದಲ್ಲಿ ರಿಜ್ವಾನ ಕೌಲಗೇರಿ, ಎಂ.ಜೆ ನದಾಫ, ಶಬ್ಬೀರ ಮುಲ್ಲಾ, ಎಸ್.ಎಸ್ ಚೌಥಾಯಿ, ಮೆಹಬೂಬ ತಾಳಿಕೋಟಿ, ಸಿ.ಎಸ್ ನದಾಫ, ಆರ್.ಬಿ ಖಾದಿರನವರ, ಎಂ.ಎಚ್ ಶಿರಹಟ್ಟಿ, ಹಮೀದುಲ್ಲಾ ಹುಯಿಲಗೋಳ, ಕೆ.ಚ್ ನರಗುಂದ, ಫರೀದಾಬೇಗಂ ಬಳ್ಳಾರಿ, ಅಬ್ದುಲ್‌ಮುನಾಫ ಬಿಜಾಪೂರ, ರಷೀದ್ ಸೇರಿದಂತೆ ಪಾಲಕ-ಪೋಷಕರು ಉಪಸ್ಥಿತರಿದ್ದರು.

ಉದ್ಘಾಟನೆ ನೆರವೇರಿಸಿ ಮಾತನಾಡಿದ ಜಿಲ್ಲಾ ಯುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಕೃಷ್ಣಗೌಡ ಪಾಟೀಲ, ನಾವಿಂದು ವೃತ್ತಿಪರ ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡಬೇಕಿದೆ. ಆಧುನಿಕ ಮತ್ತು ಸ್ಪರ್ಧಾತ್ಮಕ ದಿನಗಳಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ಕಲಿಕೆಯು ಕವಲೊಡೆಯುತ್ತಿವೆ. ಪದವಿ ಶಿಕ್ಷಣದ ಬಳಿಕ ಉನ್ನತ ಶಿಕ್ಷಣಕ್ಕೆ ಮಾರ್ಗಗಳು ವೈದ್ಯಕೀಯ, ತಾಂತ್ರಿಕ, ಕಂಪ್ಯೂಟರ್ ವಿಜ್ಞಾನ ಅಲ್ಲದೆ ಹಲವಾರು ವೈವಿಧ್ಯಮ ಕೋರ್ಸಗಳು ಬಂದಿದ್ದು, ಬದಲಾದ ಸನ್ನಿವೇಶಕ್ಕೆ ನಮ್ಮ ಜೀವನ ಶೈಲಿಯನ್ನೂ ಬದಲಾಯಿಸುವದು ಅನಿವಾರ್ಯ ಎಂದರು.

VIJAYA SAKSHI KANNADA DAILY MORNING Editor, Printer, Publisher, & Owned by : Hussainsab M. Shareefanavar, H.No. 130/154, Balaji Nagar, Near Ring Road, Gadag-582103, Dist : Gadag- Karnataka Printed at : Sai Printing Press, Near Joda Maruti Temple, Gadag-582101, Dist : Gadag- Karnataka